

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

SIHI KAHI

KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

RNI REG No. : KARKAN/2016/75068

Volume : 08 Issue : 33 Friday 10-10-2025 E-mail : maruti.b.hosamani76@gmail.com Page: 4 Price : Rs. 1/-



## ಆನೆಗುಡ್ಡೆ ದೇವಸ್ಥಾನದಲ್ಲಿ ಮಹಾ ಅವಮಾನ, ಸೌಜನ್ಯಳ ತಾಯಿ ಮತ್ತು ಸೌಜನ್ಯಳಿಗೆ ಅರ್ಚಕನಿಂದಲೇ 'ವೇಶ್ಯೆ' ಎಂಬ ಹೀನಾಯ ನಿಂದನೆ – ರಾಜ್ಯಾದ್ಯಂತ ತೀವ್ರ ಆಕ್ರೋಶ

**ಸಿಹಿ ಕಹಿ ಸುದ್ದಿ,**

**ಉಡುಪಿ:** ಧಾರ್ಮಿಕ ಕೇಂದ್ರಗಳ ಪಾವಿತ್ರ್ಯತೆ ಮತ್ತು ಮಹಿಳೆಯರ ಘನತೆಯನ್ನೇ ಪ್ರಶ್ನಿಸುವಂತಹ ಒಂದು ಗಂಭೀರ ಘಟನೆ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಪ್ರಸಿದ್ಧ ಆನೆಗುಡ್ಡೆ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ನಡೆದಿದೆ. ದೇವಸ್ಥಾನದ ಅರ್ಚಕರಲ್ಲಿ ಒಬ್ಬರಾದ ದಯಾನಂದ ಎಂಬುವವರು, ಸೌಜನ್ಯ ಹೋರಾಟದಲ್ಲಿ ಭಾಗಿಯಾಗಿದ್ದ ಸೌಜನ್ಯಳ ತಾಯಿ ಕುಸುಮಾವತಿ ಅಮ್ಮ ಮತ್ತು ಸೌಜನ್ಯ ಅವರನ್ನು ಸಾರ್ವಜನಿಕವಾಗಿ, ಭಕ್ತಾದಿಗಳ ಎದುರಿನಲ್ಲಿಯೇ ಅವಾಚ್ಯ ಪದಗಳನ್ನು ಬಳಸಿ ನಿಂದಿಸಿದ್ದಾರೆ.

ಈ ಘಟನೆ ರಾಜ್ಯಾದ್ಯಂತ ತೀವ್ರ ಚರ್ಚೆಗೆ ಮತ್ತು ಭಕ್ತ ಸಮುದಾಯದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

**ಘಟನೆಯ ಸ್ವರೂಪ: ದೇವರ ಸನ್ನಿಧಿಯಲ್ಲೇ ಹೀನಾಯ ನಿಂದನೆ:** ದೇವಸ್ಥಾನದಲ್ಲಿ ಮಂಗಳಾರತಿ ಮುಗಿಸಿ ಹೊರಬರುತ್ತಿದ್ದ ಸೌಜನ್ಯ ಪರ ಹೋರಾಟಗಾರರನ್ನು ಅರ್ಚಕ ದಯಾನಂದ ಅವರು ತಡೆದು, ಹೋರಾಟಗಾರರನ್ನು ಉದ್ದೇಶಿಸಿ ಮಾತನಾಡುವಾಗ, ಸೌಜನ್ಯ ಮತ್ತು ಅವರ ತಾಯಿ ಕುಸುಮಾವತಿ ಅಮ್ಮನವರನ್ನು "ವೇಶ್ಯೆ" ಎಂಬಂತಹ ಅತ್ಯಂತ ಕೀಳು ಮತ್ತು ಅಸಹ್ಯಕರ ಪದದಿಂದ ನಿಂದಿಸಿ ಅವಮಾನ ಮಾಡಿದ್ದಾರೆ ಎಂದು ದೂರು ಕೇಳಿಬಂದಿದೆ. ಸಾರ್ವಜನಿಕ ಸ್ಥಳದಲ್ಲಿ, ಅದರಲ್ಲೂ ದೇವಸ್ಥಾನದಂತಹ ಪವಿತ್ರ ಆವರಣದಲ್ಲಿ, ಒಬ್ಬ ಅರ್ಚಕರು ಇಂತಹ ಕೊಳಕು ಪದಗಳನ್ನು ಬಳಸಿ ಹೆಣ್ಣು ಮಕ್ಕಳನ್ನು ನಿಂದಿಸಿದ್ದು ಅಲ್ಲಿ ನೆರೆದಿದ್ದ ಎಲ್ಲ ಭಕ್ತಾದಿಗಳಿಗೆ



ದಿಗ್ಭ್ರಮೆ ಮೂಡಿಸಿತು.

**ಸಾರ್ವಜನಿಕರ ಪ್ರತಿರೋಧ ಮತ್ತು ಕ್ಷಮೆ ನಾಟಕ :** ಅರ್ಚಕರ ಈ ನಡವಳಿಕೆ ತಕ್ಷಣವೇ ಸ್ಥಳದಲ್ಲಿದ್ದ ಇತರ ಭಕ್ತಾದಿಗಳ ಆಕ್ರೋಶಕ್ಕೆ ಕಾರಣವಾಯಿತು. "ದೇವರ ಎದುರು ನಿಂತು ಇಂತಹ ಕೊಳಕು ಪದಗಳನ್ನು ಬಳಸಲು ನಾಚಿಕೆಯಾಗುವುದಿಲ್ಲವೇ? ಕೂಡಲೇ ಕ್ಷಮೆ ಯಾಚಿಸಿ" ಎಂದು ಸಾರ್ವಜನಿಕರು ಒತ್ತಾಯಿಸಿದರು.

ಮೊದಲಿಗೆ ತಮ್ಮನ್ನು ಸಮರ್ಥಿಸಿಕೊಳ್ಳಲು ಪ್ರಯತ್ನಿಸಿದ ಅರ್ಚಕ ದಯಾನಂದ, ಈ ಪದಗಳನ್ನು ಪತ್ರಿಕೆಗಳಲ್ಲಿ ಮತ್ತು ವಾಟ್ಸಪ್ಗಳಲ್ಲಿ ನೋಡಿದ್ದೇನೆ ಎಂದು ಸುಳ್ಳು ಹೇಳುವ ಮೂಲಕ ಮಾಧ್ಯಮದವರ ಮೇಲೆ ಗೂಬೆ ಕೂರಿಸಲು ಯತ್ನಿಸಿದರು.

ಮಾಧ್ಯಮ ಪ್ರತಿನಿಧಿಗಳು ಹಾಗೂ ಸಾರ್ವಜನಿಕರ ದಿಗ್ಬಂಧನಕ್ಕೆ ಒಳಗಾದಾಗ, ಅಂತಿಮವಾಗಿ ಅವರು ತಮ್ಮ ತಪ್ಪನ್ನು ಒಪ್ಪಿಕೊಂಡು ಬೇಷರತ್ ಕ್ಷಮೆಯಾಚಿಸಿದರು. ಕ್ಷಮೆಯಾಚನೆಯ ವೀಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದ್ದು, ಆಕ್ರೋಶಕ್ಕೆ ಮತ್ತಷ್ಟು ಇಂಬು ನೀಡಿವೆ.

**ಧಾರ್ಮಿಕ ನಾಯಕತ್ವದ ಮೇಲೆ ಸವಾಲು: ಎತ್ತರದ ಪ್ರಶ್ನೆಗಳು :** ಈ ಘಟನೆಯು ಕರ್ನಾಟಕದಾದ್ಯಂತ ಧಾರ್ಮಿಕ ವಲಯ ಮತ್ತು ಸಾರ್ವಜನಿಕ ಸಮುದಾಯದಲ್ಲಿ ಹಲವಾರು ಗಂಭೀರ ಪ್ರಶ್ನೆಗಳನ್ನು ಮತ್ತು ಆತಂಕಗಳನ್ನು ಹುಟ್ಟುಹಾಕಿದೆ.

ಮೌಲ್ಯಗಳ ಮತ್ತು ಕುಲದ ಅವಮಾನ: ಸಮಾಜಕ್ಕೆ ಮಾರ್ಗದರ್ಶನ ನೀಡುವ ಪೂಜಾರಿ ಸ್ಥಾನದಲ್ಲಿರುವ ವ್ಯಕ್ತಿಯು ರಾಜಕೀಯ ದ್ವೇಷಕ್ಕಾಗಿ ಅಥವಾ ಅಭಿಪ್ರಾಯಭೇದಕ್ಕಾಗಿ ಮಹಿಳೆಯರನ್ನು ಬಹಿರಂಗವಾಗಿ ನಿಂದಿಸಲು ಅತ್ಯಂತ ಕೀಳು ಪದಗಳನ್ನು ಬಳಸುವುದು ಬ್ರಾಹ್ಮಣ ಕುಲಕ್ಕೆ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಮಾಡುವ ಅತಿದೊಡ್ಡ ಅವಮಾನವಾಗಿದೆ.

**ಮಹಿಳಾ ಭದ್ರತೆ ಮತ್ತು ದೇವಸ್ಥಾನದ ಪಾವಿತ್ರ್ಯತೆ:** ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ಧಾರ್ಮಿಕ ಸ್ಥಳದಲ್ಲಿ ಇಂತಹ ಮನಸ್ಥಿತಿಯ ಅರ್ಚಕರು ಇರುವುದು ಅತ್ಯಂತ ಅಪಾಯಕಾರಿ. "ಗೌರವವಿಲ್ಲದ ಅರ್ಚಕರು ದೇವಸ್ಥಾನದಲ್ಲಿದ್ದರೆ, ಒಳಗೆ ಬರುವ ಮಹಿಳೆಯರ ಗತಿ ಏನು?" ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ. ಆಡಳಿತ ಮಂಡಳಿಯು ಮಹಿಳೆಯರಿಗೆ ಗೌರವ ಕೊಡದ ಅರ್ಚಕನನ್ನು ಇಟ್ಟುಕೊಳ್ಳುವುದು ಸರಿಯೇ ಎಂಬ ಪ್ರಶ್ನೆ ಎದುರಾಗಿದೆ.

**ತಕ್ಷಣದ ಕ್ರಮಕ್ಕೆ ಆಗ್ರಹ: ಹೋರಾಟದ ಎಚ್ಚರಿಕೆ:** ಸಾರ್ವಜನಿಕರು ಮತ್ತು ಸಾಮಾಜಿಕ ಕಾರ್ಯಕರ್ತರು ಈ ಘಟನೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿ, ಆನೆಗುಡ್ಡೆ ದೇವಸ್ಥಾನದ ಆಡಳಿತ ಮಂಡಳಿಗೆ ಮತ್ತು ಜಿಲ್ಲಾಡಳಿತಕ್ಕೆ ಬಲವಾದ ಒತ್ತಡ ಹೇರಿದ್ದಾರೆ.

ವಜಾಗೆ ಒತ್ತಾಯ: ಅರ್ಚಕ ದಯಾನಂದ ಅವರ ವಿರುದ್ಧ ತಕ್ಷಣವೇ ಸೂಕ್ತ ಕಾನೂನು ಮತ್ತು ವೃತ್ತಿಪರ ಕ್ರಮ (ನೇಮಕಾತಿಯಿಂದ ವಜಾ ಮಾಡುವುದು ಸೇರಿದಂತೆ) ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ್ದಾರೆ. ಅಂತಹ ವ್ಯಕ್ತಿಗಳನ್ನು ಪವಿತ್ರ ಸ್ಥಾನಗಳಲ್ಲಿ ಇರಿಸಿಕೊಂಡರೆ, ದೇವಸ್ಥಾನಗಳ ಮೇಲೆ ಜನರು ಇಟ್ಟಿರುವ ವಿಶ್ವಾಸಕ್ಕೆ ಧಕ್ಕೆಯಾಗಲಿದೆ ಎಂದು ಎಚ್ಚರಿಸಿದ್ದಾರೆ.

ಪ್ರಸ್ತುತ ಸ್ಥಿತಿ: ಅರ್ಚಕರು ಕ್ಷಮೆ ಯಾಚಿಸಿದ್ದರೂ, ಈ ವರದಿ ಮಾಡುವ ಹೊತ್ತಿಗೆ ದೇವಸ್ಥಾನ ಆಡಳಿತ ಮಂಡಳಿ ಅಥವಾ ಜಿಲ್ಲಾಡಳಿತದ ಕಡೆಯಿಂದ ಅವರ ವಿರುದ್ಧ ಯಾವುದೇ ಅಧಿಕೃತ ಕಾನೂನಾತ್ಮಕ ಅಥವಾ ಆಡಳಿತಾತ್ಮಕ ಕ್ರಮ ಕೈಗೊಂಡಿರುವ ಬಗ್ಗೆ ಸ್ಪಷ್ಟ ಮಾಹಿತಿಯಿಲ್ಲ. ತಪ್ಪಿತಸ್ಥರ ವಿರುದ್ಧ ಕ್ರಮವಾಗುವವರೆಗೆ ಹೋರಾಟವನ್ನು ಮುಂದುವರಿಸುವುದಾಗಿ ಸೌಜನ್ಯ ಪರ ಹೋರಾಟಗಾರರು ಘೋಷಿಸಿದ್ದಾರೆ.

**ವರದಿ:ಆರತಿ.ಗಿಳಿಯಾರು.ಉಡುಪಿ**

## ಸರಕಾರದ ಅನುದಾನ ಯಾರ ಪಾಲಾಗುತ್ತಿದೆ ಎಂದು – ರಾಜ್ಯಾಧ್ಯಕ್ಷ ತಾಹೇರ್.ಹುಸೇನ್ ಪ್ರಶ್ನೆ




**ಸಿಹಿ ಕಹಿ ಸುದ್ದಿ,**

**ಮಾನ್ವಿ:** ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಸರಕಾರ ಅನುದಾನ ಕೊಟ್ಟರು ಸಹ ಈ ಭಾಗದ ರಾಜಕಾರಣಿಗಳ ನಿಷ್ಕಾಳಜಿ ಯಿಂದಾಗಿ ಅಭಿವೃದ್ಧಿ ಅನ್ನೋದು ಇಲ್ಲಿ ಇಲ್ಲವಾಗಿದೆ ಎಂದು ವೆಲ್ಫೇರ್ ಪಾರ್ಟಿ ರಾಜ್ಯಾಧ್ಯಕ್ಷ ತಾಹೇರ್ ಹುಸೇನ್ ಗುಡುಗಿದರು.

ರಾಯಚೂರು ಜಿಲ್ಲೆಯ ಮಾನ್ವಿ ಪಟ್ಟಣದಲ್ಲಿ ವೆಲ್ಫೇರ್ ಪಾರ್ಟಿ ಹಮ್ಮಿಕೊಂಡಿದ್ದ ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗಾಗಿ ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ,

ಜನರಿಂದ ಆಯ್ಕೆಯಾದ ಶಾಸಕರು ಸಚಿವರು ಮತ್ತು ಸಂಸದರು ಕಲ್ಯಾಣ ಕರ್ನಾಟಕ ಭಾಗವನ್ನು ಅಭಿವೃದ್ಧಿ ಮಾಡದೆ ಬೆಂಗಳೂರಲ್ಲಿ ಸಂಸಾರ ಸಮೇತವಾಗಿ ಉಳಿದು ಕೊಳ್ಳುತ್ತಾರೆ. ಆದರೆ ಈ ಭಾಗದ ಸಮಸ್ಯೆ ಮತ್ತು ಅಭಿವೃದ್ಧಿ ಮಾಡೋದು ಯಾರು ಎಂದು ಪ್ರಶ್ನಿಸಿದರು.

ಕಲ್ಯಾಣ ಕರ್ನಾಟಕ ಭಾಗವಾದ ಮಾನ್ವಿ ವಿಧಾನ ಸಭಾ ಕ್ಷೇತ್ರವು ಅಭಿವೃದ್ಧಿ ಹೊಂದಿಲ್ಲ ಇಲ್ಲಿನ ಶಾಸಕರ ನಿಷ್ಕಾಳಜಿಯಿಂದ ಅಭಿವೃದ್ಧಿಯಾಗಿಲ್ಲ ಇದು ದೊಡ್ಡ ದುರಂತ ಎಂದು ವೆಲ್ಫೇರ್ ಪಾರ್ಟಿ ಜಿಲ್ಲಾಧ್ಯಕ್ಷ ಫರೀದ್ ಉಮ್ರಿ ಆಕ್ರೋಶ ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಚಾನೆಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ಬೆಳೆಯಲು ಛಲ, ಆತ್ಮಸ್ಥೈರ್ಯ ಬೇಕು: ಕಸಾಪ ರಾಜ್ಯಾಧ್ಯಕ್ಷ ಮಹೇಶ ಜೋಶಿ ಉವಾಚ

**ಮುಧೋಳ :** ಈ ಹುಡುಗನಿಗೆ ಭವಿಷ್ಯವಿಲ್ಲ. ಪರೀಕ್ಷೆ ಪಾಸ್ ಆಗುವುದಿಲ್ಲ. ಸರ್ಕಾರಿ ನೌಕರಿ ಸಿಗೋದಿಲ್ಲ. ಈತನನ್ನು ಎಲ್ಲಿಯಾದರೂ ಕೆಲಸಕ್ಕೆ ಕಳಿಸಿ ಎಂದು ಧಾರವಾಡದ ಪ್ರಸಿದ್ಧ ಜ್ಯೋತಿಷಿಯೊಬ್ಬರು ನಾನು ವಿದ್ಯಾರ್ಥಿಯಾಗಿದ್ದಾಗ ನನ್ನ ಭವಿಷ್ಯ ನುಡಿದಿದ್ದರು. ನಮ್ಮ ಮನೆಯವರು ಇದನ್ನು ನಂಬಿದ್ದರು. ನಾನು ಬಿ. ಎ. ಪಾಸಾದೆ. ಹದಿನೇಳು ಸರ್ಕಾರಿ ನೌಕ–ರಿಗಳು ನನ್ನನ್ನು ಅರಸಿ ಬಂದಿದ್ದವು. ನಾನು ಮೊದಲು ಕಾರ್ಮಿಕ ಕಮಿಷನರ್ ಎಂದು ನೇಮಕಗೊಂಡೆ. ಛಲದಿಂದ ಕೆಲಸ ಮಾಡಿದರೆ ಬೇಕಾದ್ದನ್ನು ಸಾಧಿಸಬಹುದು. ಬರಹವೂ ಕೂಡ ಹಾಗೆಯೇ ಎಂದು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ನಾಡೋಜ ಮಹೇಶ ಜೋಶಿ ಹೇಳಿದರು.

ಅವರು ಡಾ. ಕುಬಸದ ಅವರ ಪರ್ಣಕುಟಿಯಲ್ಲಿ ಆಯೋಜಿಸಿದ್ದ ಹಲವಾರು ಹಿರಿಯ ಸಾಹಿತಿಗಳು ಸೇರಿ "ನಾನೇಕೆ ಬರೆಯಲಾರಂಭಿಸಿದೆ" ಎಂಬ ಅನುಭವ ಸಂವಾದದಲ್ಲಿ ಭಾಗವಹಿಸಿ



ಅವರು ಮಾತನಾಡಿದರು.

ಬದುಕಿನಲ್ಲಿ ಛಲವಿಲ್ಲದೆ ಬೆಳೆಯುವುದು ಸಾಧ್ಯವಿಲ್ಲ. ನಾನು ನನ್ನ ಕಾರ್ಯವನ್ನು ನನ್ನ ಆತ್ಮಸಾಕ್ಷಿಗೆ ಅನುಸರಿಸಿ ಮಾಡಿಕೊಂಡು ಹೊರಟಿದ್ದೇನೆ.ಯಾರಿಗೂ ಹೆದರಬೇಕಾಗಿಲ್ಲ ಎಂದು ಅವರು ಹೇಳಿದರು.

ಡಾ. ಶಿವಾನಂದ ಕುಬಸದ ಮಾತನಾಡಿ, ಮೊದಲಿನಿಂದಲೂ ಕವನ ಬರೆಯುವ ಹವ್ಯಾಸ ಹೊಂದಿದ್ದು, ವೈದ್ಯಕೀಯ ಕ್ಷೇತ್ರದಲ್ಲಿ ಬಿಡುವಿಲ್ಲದ ಝುಂಜಾಟದಲ್ಲಿ ಕೆಲ ಸಮಯ ಬಿಡುವು ಮಾಡಿಕೊಂಡು ಸಾಹಿತ್ಯ ರಚನೆ ಮಾಡಲಾರಂಭಿಸಿದ್ದು ವೈದ್ಯರಾಗಿ ತಾವು ಕಂಡ ಹಲವಾರು ಮನ ಕಲಕುವ ಘಟನೆಗಳ ಕುರಿತು ತಮ್ಮ ಅನುಭವ ಬರವಣಿಗೆಯ ಮೂಲಕ ಹಂಚಿಕೊಳ್ಳಲು ಕಾರಣವಾಯಿತು ಎಂದರು.

ನ್ಯಾಯವಾದಿ ಪ್ರಕಾಶ ವಸ್ತ್ರದ ಮಾತನಾಡಿ, ಚಿಕ್ಕಂದಿನಿಂದಲೂ ಓದುವ, ಬರೆಯುವ ಹವ್ಯಾಸ ಹೊಂದಿದ್ದರೂ ಅವಕಾಶ ದೊರೆತಿರಲಿಲ್ಲ.

ನ್ಯಾಯವಾದಿಯಾಗಿ ಉದ್ಯೋಗ ಆರಂಭಿಸಿದ ನಂತರ ಕೋವಿಡ್ ಸಂದರ್ಭದಲ್ಲಿ ಕವನಗಳ ರಚನೆ ಹಾಗೂ ಕೆಲ ಕಕ್ಷಿದಾರರ ಘಟನೆಗಳು ಮನಸ್ಸಿನಾಳದಲ್ಲಿ ಉಳಿದಿದ್ದು,

ಅವನ್ನು ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯಲ್ಲಿ 'ಅಡ್ವೋಕೇಟ್ ಡೈರಿ' ಎಂದು ಅಂಕಣ ಬರೆಯಲಾರಂಭಿಸಿದೆ. ಮೊದಲು 'ಮುಖಗವಸು' ಕವನ ಸಂಕಲನ ಬಿಡುಗಡೆಗೊಂಡಿತು. ಮುಂದೆ ಅಡ್ವೋಕೇಟ್ ಡೈರಿ ಬೆಂಗಳೂರಿನಲ್ಲಿ ಬಿಡುಗಡೆಗೊಂಡಿತು ಎಂದು ತಿಳಿಸಿದರು.

ಮಲ್ಲಿಕಾರ್ಜುನ ಹೆಗ್ಗಳಗಿ, ವಿ. ಎಚ್. ಮೂಲಿಮನಿ, ವೈ. ಎಚ್. ಕಾತರಕಿ, ಕಾಶಿನಾಥ ಮೊರಬ ತಮ್ಮ ಅನುಭವಗಳನ್ನು ಹಂಚಿಕೊಂಡರು.

ಪತ್ರಕರ್ತ ಅಶೋಕ ಕುಲಕರ್ಣಿ, ಮಹಾಂತೇಶ ಕರೆಹೊನ್ನ, ಸಂಗಮೇಶ ನೀಲಗುಂದ, ಐ. ಎಮ್. ಧಾರವಾಡಮಠ, ಮಹಾಂತೇಶ ನರಸನಗೌಡ್ರ, ಮಲ್ಲಿಕಾರ್ಜುನ ಬಟಕುರ್ಕಿ, ಉಪಸ್ಥಿತರಿದ್ದರು. ಮೂಲಿಮನಿಯವರ ಗ್ರಂಥವನ್ನು ಜೋಶಿ ಬಿಡುಗಡೆಗೊಳಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಸಾಪ ತಾಲೂಕಾಧ್ಯಕ್ಷ ಆನಂದ ಪೂಜಾರಿ ಸ್ವಾಗತಿಸಿ, ನಿರೂಪಿಸಿದರು.

## ತಾಲೂಕ ದಂಡಾಧಿಕಾರಿಗಳಿಗೆ ಕೃಷಿ ತಜ್ಞ ಡಾ, ಶೌಕತ ಅಲಿ ಬಳಗದಿಂದ ಗೌರವ ಸತ್ಕಾರ



**ನವಲಗುಂದ :** ತಾಲೂಕಿನ ಕ್ರಿಯಾಶೀಲ ದಂಡಾಧಿಕಾರಿಗಳಾದ ಸುದೀರ್ ಸಾಹುಕಾರ ರವರಿಗೆ ಕೃಷಿ ತಜ್ಞ ಪ್ರಗತಿಪರ ರೈತರದ ಡಾ, ಶೌಕತ ಅಲಿ ಬಳಗದಿಂದ ಗೌರವ ಸತ್ಕಾರ ಮಾಡಿ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು ಕೋರಿದರು. ಅವರ ಭವಿಷ್ಯದ ಕನಸುಗಳು ಸಾಕಾರಗೊಳ್ಳಲೆಂದು ಶುಭ ಹಾರೈಸಿದರು.

## ಜಗದ್ಗುರುಗಳು, ಪೂಜ್ಯರ ಉಚ್ಚಾಟನೆ ಯಾರಿಂದಲೂ ಸಾಧ್ಯವಿಲ್ಲ: ಬಸನಗೌಡ ಪಾಟೀಲ ಯತ್ನಾಳ

**ಮಹಾಲಿಂಗಪುರ :** ಕೂಡಲ ಸಂಗಮದ ಜಗದ್ಗುರುಗಳನ್ನು ಉಚ್ಚಾಟನೆ ಮಾಡುವ ಅಧಿಕಾರ ಯಾರಿಗೂ ಇಲ್ಲ. ಅದರ ಕುರಿತು ಪೂಜ್ಯರು, ಭಕ್ತರು ತಲೆ ಕೆಡಿಸಿಕೊಳ್ಳದೇ ಪೂಜ್ಯರ ಜೊತೆಗೆ ಸಮಾಜದ ಸಂಘಟನೆ ಮಾಡೋಣ ಎಂದು ವಿಜಯಪುರದ ಶಾಸಕ, ಉತ್ತರ ಕರ್ನಾಟಕದ ಹಿಂದೂ ಫೈರ್ ಬ್ರ್ಯಾಂಡ್ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಶನಿವಾರ ಸಮೀಪದ ಮದಭಾಂವಿ ರಾಣಿ ಚನ್ನಮ್ಮ ಕಮೀಟಿ ಮದಭಾಂವಿ ಹಾಗೂ ರಬಕವಿ–ಬನಹಟ್ಟಿ ತಾಲೂಕಾ ಪಂಚಮಸಾಲಿ ಸಮಾಜದ ಆಶ್ರಯದಲ್ಲಿ ಜರುಗಿದ ಚನ್ನಮ್ಮಳ 247ನೇ ಜಯಂತ್ಯೋತ್ಸವ, 201ನೇ ವಿಜಯೋತ್ಸವ ಹಾಗೂ ಚನ್ನಮ್ಮ ವೃತ್ತದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿಯೇ ಅತೀ ದೊಡ್ಡ ಚನ್ನಮ್ಮಳ ಕಂಚಿನ ಮೂರ್ತಿ ಅನಾವರಣಗೊಳಿಸಿ ಮಾತನಾಡಿದ ಅವರು, ಮದಭಾಂವಿಯಂತಹ ಗ್ರಾಮದಲ್ಲಿ ಸುಮಾರು 42 ಲಕ್ಷ ರೂ. ವೆಚ್ಚದಲ್ಲಿ ಅತೀ ದೊಡ್ಡ ಕಂಚಿನ ಮೂರ್ತಿ ಪ್ರತಿಷ್ಠಾಪಿಸಿದ್ದು ಶ್ಲಾಘನೀಯ.

ಕೂಡಲ ಸಂಗಮದಲ್ಲಿನ ಪೀಠದ ನಾಲ್ಕು ಎಕರೆ ಜಾಗದ ಕುರಿತು ಚಿಂತಿಸುವುದನ್ನು ಬಿಟ್ಟು ಬಿಡಿರಿ. ಮತ್ತೊಂದು ಮಠ ಕಟ್ಟೋಣ. ಎಲ್ಲ ಭಕ್ತರ ಸಹಕಾರದಿಂದ ಹೊಸ ಜಾಗೆಯನ್ನು ಖರೀದಿಸಿ ಒಂದು ಸಾವಿರ ಮಕ್ಕಳು ಕಲಿಯುವಂತಹ ಸಮಾನತೆಯ ಹಾಸ್ಟೆಲ್ ನಿರ್ಮಿಸಿ, ಎಲ್ಲಾ ಸಮಾಜಗಳ ವಿದ್ಯಾರ್ಥಿಗಳು ಕಲಿಯಲು ಅವಕಾಶ ನೀಡುವ ಸಂಕಲ್ಪವಿದೆ. ಅದಕ್ಕಾಗಿ ಪಂಚಮಸಾಲಿ ಸಮಾಜದಲ್ಲಿ ಆರ್ಥಿಕ ಸಧೃಢತೆಯುಳ್ಳವರು ಹಾಸ್ಟೇಲ್ ನಿರ್ಮಾಣಕ್ಕೆ ಪೂಜ್ಯರಿಗೆ ಸಹಕಾರ ನೀಡಬೇಕು ಎಂದರು.

ಸ್ವಾಮಿಗಳ ಹಣ, ಜೋಳಿಗೆ ಹಣ ತಂದ ಮನೆಗಳು ಎಂದಿಗೂ ಉದ್ಧಾರವಾಗುವದಿಲ್ಲ. ಪಂಚಮಸಾಲಿ ಸಮಾಜವು ಎಲ್ಲ–ರಿಗೂ ಹಂಚಿ ತಿನ್ನುವ ಸಮಾಜವಾಗಿದೆ. ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಕ್ಕೆ ಚನ್ನಮ್ಮಳ ಜೊತೆಗೆ ಹಾಲುಮತ, ನಾಯಕ, ಲಂಬಾಣಿ, ಬಂಜಾರ, ಯಾದವರು, ಉಪ್ಪಾರ ಸಮಾಜದ ಮುಖಂಡರು ಚನ್ನಮ್ಮಳ ಹೋರಾಟದಲ್ಲಿ



ಭಾಗವಹಿಸಿದ್ದಾರೆ. ರಾಜ್ಯದ ವಿವಿಧ ಹಳ್ಳಿಗಳಲ್ಲಿ ಚನ್ನಮ್ಮಳ ಮೂರ್ತಿ ಪ್ರತಿಷ್ಠಾಪನೆಗಳು ನಡೆಯುತ್ತಿವೆ.

ಈ ಮೂಲಕ ಚನ್ನಮ್ಮಳ ಆದರ್ಶಗಳನ್ನು ಬೆಳೆಸುವಂತಾಗಲಿ ಎಂದರು.

ಸಾಧು ಸಂತರಿಗೆ ಆಸ್ತಿಯ ವ್ಯಾಮೋಹ ಇರಬಾರದು. ಭಕ್ತರೇ ಶ್ರೀಗಳಿಗೆ ಆಸ್ತಿ ಇದ್ದಂತೆ. ಎಲ್ಲರಿಗೂ ಹಂಚಿ ತಿನ್ನುವ ಸಮಾಜ ನಮ್ಮ ಪಂಚಮಸಾಲಿ ಸಮಾಜ. ಮೀಸಲಾತಿ ವಿಷಯದಲ್ಲಿ ನಮ್ಮ ಹೋರಾಟ ಮುಂದುವರೆಯುತ್ತದೆ. ಆದರೆ ಮತ್ತೊಂದು ಸಮಾಜದ ಬುತ್ತಿಯನ್ನು ಕಸಿಯುವ ಸಮಾಜ ನಮ್ಮ ಪಂಚಮಸಾಲಿ ಸಮಾಜ ಅಲ್ಲಾ. ಸಂವಿಧಾನ ಪ್ರಕಾರ ನಮ್ಮ ಸಮಾಜಕ್ಕೆ ನ್ಯಾಯ ಪಡೆಯಲು ನಮ್ಮ ಮೀಸಲಾತಿ ಹೋರಾಟ ಮಾಡುತ್ತಿದ್ದೇವೆ.

ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂ–ಜಯ ಸ್ವಾಮಿಜಿ ದಿವ್ಯ ಸಾನಿಧ್ಯದಲ್ಲಿ ಭಗೀರಥ ಪೀಠದ ಪುರುಷೋತ್ತಮಾನಂದಪುರಿ ಸ್ವಾಮಿಜಿ, ಕೌಲಗುಡ್ಡದ ಅಮರೇಶ್ವರ ಸ್ವಾಮಿಗಳು, ನಾಗಯ್ಯ ಮಠಪತಿ ಸಾನಿಧ್ಯ ವಹಿಸಿದ್ದರು. ತಾಲೂಕಾ ಅಧ್ಯಕ್ಷ ಶ್ರೀಶೈಲ ದಲಾಲ ಅಧ್ಯಕ್ಷತೆ ವಹಿಸಿದ್ದರು.

ಶಾಸಕ ಸಿದ್ದು ಸವದಿ, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ಪಂಚಮಸಾಲಿ ಸಮಾಜದ ಜಿಲ್ಲಾಧ್ಯಕ್ಷ ಧರೆಪ್ಪ ಸಾಂಗ್ಲೀಕರ, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ

**ಹಿಂದು ಸಮಾಜ ಉಳಿಯಲು ಶಿವಾಜಿ ಮಹಾರಾಜರು ಕಾರಣ : ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮ ಉಳಿಯಲು ಮತ್ತು ಇಂದು ನಮ್ಮ ಹಣೆಯಲ್ಲಿ ವಿಭೂತಿ, ಭಂಡಾರ, ಕುಂಕುಮ ಉಳಿಯುವಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಕೊಡುಗೆ ಅಪಾರವಾಗಿದೆ.**

**। ಬಸನಗೌಡ ಪಾಟೀಲ ಯತ್ನಾಳ. ಶಾಸಕರು, ವಿಜಯಪುರ.**


ಮಾತನಾಡಿದರು. ಕಟ್ಟಡದ ಶಿಲ್ಪಿ ಬೀಳಗಿಯ ಅಲಿಸಾಬ, ಮೂರ್ತಿ ಶಿಲ್ಪಿ ಮಿರಜದ ಹಣಮಂತ ಕೋತ್ಯಾಳ ಅವರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಬೆಳಗಾವಿ ಜಿಲ್ಲಾ ಪಂಚಮಸಾಲಿ ಸಮಾಜದ ಅಧ್ಯಕ್ಷ ನಿಂಗಪ್ಪ ಫೀರೋಜಿ, ಯುವ ಮುಖಂಡ ಪವನ ಕತ್ತಿ, ಮುಧೋಳ ತಾಲೂಕಾ ಅಧ್ಯಕ್ಷ ಎಸ್. ಪಿ. ದಾನಪ್ಪಗೋಳ, ಮಹಾದೇವ ಮಾರಾಪೂರ, ಆನಂದ ಹಟ್ಟಿ, ಪರಪ್ಪ ಹುದ್ದಾರ, ಸಿದ್ದುಗೌಡ ಪಾಟೀಲ, ಧರೆಪ್ಪ ಠಕ್ಕನ್ನವರ, ಅರ್ಜುನ ಹಲಗಿಗೌಡರ, ವಿದ್ಯಾಧರ ಸಿದ್ದು ಸವದಿ, ಗ್ರಾಮ ಪಂಚಾಯತ್ ಅಧ್ಯಕ್ಷ ಬಸವರಾಜ ನಾಗನೂರ, ಚನ್ನಮ್ಮ ಕಮಿಟಿ ಅಧ್ಯಕ್ಷ ಸದಾಶಿವ ಪಟ್ಟಣಶೆಟ್ಟಿ, ವಿನೋದ ಉಳ್ಳಾಗಡ್ಡಿ, ಬಸಪ್ಪ ವಗ್ಗರ, ಚನ್ನಪ್ಪ ಪಟ್ಟಣಶೆಟ್ಟಿ, ಮಲ್ಲಪ್ಪ ಅರಭಾಂವಿ, ಬಸವರಾಜ ಒಂಟಿ, ಶ್ರೀನಾಥ ಹಲಗಿಗೌಡರ, ಸಂಜು ಬಾರಕೋಲ, ಮಹಾಂತೇಶ ಉರಭಿನವರ, ಬಸವಣ್ಣಿ ಬ್ಯಾಳಿ ಸೇರಿದಂತೆ ಬಾಗಲಕೋಟೆ ಜಿಲ್ಲೆ ಮತ್ತು ರಬಕವಿ–ಬನಹಟ್ಟಿ ತಾಲ್ಲೂಕಿನ ಹಲವಾರು ಗ್ರಾಮಗಳ ಮುಖಂಡರು ಭಾಗವಹಿಸಿದ್ದರು.

ಬೃಹತ್ ಕುಂಭಮೇಳ :

ಮೂರ್ತಿ ಪ್ರತಿಷ್ಠಾಪನೆಯ ಮುನ್ನ ಸೀಮಿ ಲಕ್ಕಮ್ಮ ದೇವಸ್ಥಾನದಿಂದ ಚನ್ನಮ್ಮ ವೃತ್ತದವರೆಗೆ ಬೃಹತ್ ಕುಂಭಮೇಳ, ಚನ್ನಮ್ಮಳ ಭಾವಚಿತ್ರ ಮೆರವಣಿಗೆ, ರೊಟ್ಟಿ ಬುತ್ತಿ, ಎತ್ತಿನ ಬಂಡಿಗಳ ಭವ್ಯ ಮೆರವಣಿಗೆ ನಡೆಯಿತು. ಗ್ರಾಮದ ಸಕಲ ಸಮಾಜದ ಹಿರಿಯರು, ಯುವಕರು, ತಾಯಂದಿರು ಚನ್ನಮ್ಮ ಮೂರ್ತಿ ಪ್ರತಿಷ್ಠಾಪನೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು.

## ಬೀದಿನಾಯಿಗಳ ಕಾಟ: ಜನರ ಪೀಕಲಾಟ: ಮನೆಯಿಂದ ಹೊರಬಾರದ ಚಿಕ್ಕಮಕ್ಕಳು






**ರಬಕವಿ–ಬನಹಟ್ಟಿ :** ಅವಳಿ ನಗರಾದ್ಯಂತ ಬೀದಿ ನಾಯಿಗಳ ಸಂಖ್ಯೆ ಮಿತಿ ಮೀರಿ ಉಲ್ಬಣಗೊಂಡಿದ್ದು, ಅವುಗಳ ಉಪಟಳದಿಂದ ಸಾರ್ವಜನಿಕರ ನಿಶ್ಚಿಂತ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದ್ದರೆ, ಕೆಲ ಬಡಾವಣೆಗಳಲ್ಲಿ ಚಿಕ್ಕಮಕ್ಕಳು ಮತ್ತು ವೃದ್ಧರು ಮನೆ ಬಿಟ್ಟು ಹೊರಬಾರದೆ ತೀವ್ರ ಸಮಸ್ಯೆ ಎದುರಿಸುತ್ತಿದ್ದಾರೆ. ನಡುರಸ್ತೆಯಲ್ಲೇ ಗುಂಪು–ಗುಂಪಾಗಿ ಬಿಡಾಡಿ ನಾಯಿಗಳು ವ್ಯಗ್ರವಾಗಿ ನಿಲ್ಲತೊಡಗಿದ್ದು, ವಾಹನ ಸಂಚಾರಕ್ಕೂ ತೊಡಕಾಗುತ್ತಿದ್ದು ಕೆಲ ನಾಯಿಗಳು ಅಟ್ಟಿಸಿಕೊಂಡು ಬರುವುದರಿಂದ ವಾಹನ ಅಪಘಾತಗಳು ಸಾಮಾನ್ಯವಾಗಿವೆ.

ಎಲ್ಲೆಂದರಲ್ಲಿ ನಾಯಿಗಳ ಆಕ್ರಮಣ: ಬಸ್ ನಿಲ್ದಾಣ, ಮಂಗಳವಾರ ಪೇಟೆ, ಸೋಮವಾರ ಪೇಟೆ, ಲಕ್ಷ್ಮಿ ನಗರ, ವಿದ್ಯಾನಗರ, ಆಸ್ಪತ್ರೆ, ಮಾರುಕಟ್ಟೆ ಸೇ–ರಿದಂತೆ ಪ್ರಮುಖ ಪ್ರದೇಶಗಳಲ್ಲಿ ಬೀದಿ ನಾಯಿಗಳ ದಾಂಧಲೆ ಮಿತಿ ಮೀರಿದೆ. ಶನಿವಾರದ ಸಂತೆಯಲ್ಲೂ ನಾಯಿಗಳದ್ದೇ ಚಿಂತೆಯಾದರೆ, ಬೆಳಗ್ಗಿನಿಂದಲೇ ನಾಯಿಗಳ ದಂಡು ರಸ್ತೆ ಮೇಲೆ ರಾಜಾರೋಷವಾಗಿ ಜನರನ್ನು ಹೆದರಿಸುವ ಕಾರ್ಯದಲ್ಲಿರುವ ಚಿತ್ರವಂತೂ ಎಂಥವರನ್ನೂ ಗಾಬರಿಯಾಗಿಸಲು ಕಾರಣವಾಗಿದೆ. ನಗರಸಭೆ ಈ ಕೂಡಲೇ ನಾಯಿಗಳ ನಿಯಂತ್ರಣ ಹಾಗೂ ಸೂಕ್ತ ಪರಿಹಾರ ಒದಗಿಸಬೇಕಿದೆ.

ಸಾರ್ವಜನಿಕರ ಗೋಳಾಟದಿಂದ ಪಾರಾಗಲು ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕಾರ್ಯಗತವಾಗಬೇಕಿದೆ.

**'ಮಕ್ಕಳನ್ನು ಮನೆಯಿಂದ ಹೊರಗೆ ಕಳಿಸುವುದೇ ದುರ್ಲಭವಾಗಿದೆ. ಬೈಕ್ ಸವಾರರಂತೂ ನಿತ್ಯ ಸಮಸ್ಯೆ ಎದುರಿಸುವದು ತಪ್ಪಿಲ್ಲ. ಸೂಕ್ತ ಕ್ರಮ ಜರುಗಿಸಬೇಕು.'**

**। ಪ್ರಶಾಂತ ಕೊಳಕಿ, ಬನಹಟ್ಟಿ.**

---

**'ಈಗಾಗಲೇ ನಾಯಿಗಳ ನಿಯಂತ್ರಣಕ್ಕೆ ಸಿಬ್ಬಂದಿಗಳು ಕಾರ್ಯ ಪ್ರವೃತ್ತರಾಗಿದ್ದಾರೆ. ಸಮಸ್ಯೆಯಿರುವ ಪ್ರದೇಶಗಳಲ್ಲಿ ತಕ್ಷಣ ಸ್ಪಂದಿಸುವಲ್ಲಿ ತಯಾ–ರಿಯಲ್ಲಿದ್ದೇವೆ.'**

**। ರಮೇಶ ಜಾಧವ, ಪೌರಾಯುಕ್ತರು, ನಗರಸಭೆ ರಬಕವಿ–ಬನಹಟ್ಟಿ.**

# ಪ್ರಕೃತಿ ವಿಕೋಪ ಪರಿಹಾರದ ಹಣವನ್ನು ಗ್ಯಾರಂಟಿಗೆ ಬಳಸಿಲ್ಲ: ಸಿದ್ದರಾಮಯ್ಯ ಸ್ಪಷ್ಟನೆ

**ಬೆಳಗಾವಿ :** 'ಪ್ರಕೃತಿ ವಿಕೋಪ ಪರಿಹಾರ (ಎನ್.ಡಿ.ಆರ್.ಎಫ್) ಹಣವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿಲ್ಲ. ಬಿಜೆಪಿಯವರಿಗೆ ಕಾಮಾಲೆ ರೋಗ ಅಂಟಿಕೊಂಡಿದೆ. ವಿನಾಕಾರಣ ಆರೋಪ ಮಾಡುತ್ತಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ಇಲ್ಲಿನ ಸಾಂಬ್ರಾ ವಿಮಾನ ನಿಲ್ದಾಣದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ವಿಪಕ್ಷದ ನಾಯಕ ಆರ್.ಅಶೋಕ ಅವರ ಮಾತಿಗೆ ಅರ್ಥವಿಲ್ಲ. ಗ್ಯಾರಂಟಿ ಯೋಜನೆಗಳು ಯಶಸ್ವಿ ಆಗಿದ್ದರಿಂದ ಅವರಿಗೆ ತಳಮಳ ಶುರುವಾಗಿದೆ' ಎಂದರು.

ಪ್ರಧಾನಿ ಮೋದಿ ಆದಿಯಾಗಿ ಎಲ್ಲ ಬಿಜೆಪಿಗರೂ ಗ್ಯಾರಂಟಿಗಳ ಅನುಷ್ಠಾನ ಸಾಧ್ಯವೇ ಇಲ್ಲ ಎಂದಿದ್ದರು. ಈಗ ನಮ್ಮದೇ ಗ್ಯಾರಂಟಿ ಯೋಜನೆಗಳ ಉಪಾಯವನ್ನು ಬಿಜೆಪಿ ಸರ್ಕಾರಗಳು ಕಾಪಿ ಮಾಡುತ್ತಿವೆ. ಹರಿಯಾಣ, ದೆಹಲಿ, ರಾಜಸ್ಥಾನ, ಮಹಾರಾಷ್ಟ್ರ ರಾಜ್ಯಗಳಲ್ಲಿ ನಮ್ಮ ಯೋಜನೆಗಳನ್ನು ಅನುಕರಣೆ ಮಾಡುತ್ತಿದ್ದಾರೆ' ಎಂದರು.

ಮುಂದೆಯೂ ನಾನೇ ಸಿ.ಎಂ ಎನ್ನುವ ಮೂಲಕ ಸಿದ್ದರಾಮಯ್ಯ ಕಾಂಗ್ರೆಸ್ ಹೈಕಮಾಂಡ್‌ಗೆ ಸೆಡ್ಡು ಹೊಡೆದಿದ್ದಾರೆ' ಎಂಬ ಸಿ.ಟಿ.ರವಿ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನಮ್ಮ ಪಕ್ಷದ ಆಂತರಿಕ ವಿಚಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ಸಿ.ಟಿ.ರವಿ ಯಾರು? ಅವರೇನು ನಮ್ಮ ಹೈಕಮಾಂಡೇ' ಎಂದು ಮರುಪ್ರಶ್ನಿಸಿದರು.

ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ಮಾತನಾಡಿ, 'ಬೆಳಗಾವಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ವಹಣೆಯನ್ನು ಖಾಸಗಿಯವರಿಗೆ ಕೊಟ್ಟಿಲ್ಲ. ಕೆಎಲ್‌ಇ ಸಂಸ್ಥೆಯ ಡಾ.ಪ್ರಭಾಕರ ಕೋರೆ ಆಸ್ಪತ್ರೆ ಹಾಗೂ ವೈದ್ಯಕೀಯ ಸಂಶೋಧನಾ ಕೇಂದ್ರದ ವೈದ್ಯರು ಉಚಿತವಾಗಿ ಸೇವೆ ನೀಡಲಿದ್ದಾರೆ. ವೈದ್ಯರ ನೇಮಕಾತಿಗೆ ಅರ್ಜಿ ಆಹ್ವಾನಿಸಿದ್ದೆವು. ಈ ವೇಳೆ 11 ವೈದ್ಯರನ್ನು ನೇಮಕ ಮಾಡಿಕೊಳ್ಳಲಾಗಿದೆ. ಇನ್ನುಳಿದ ಖಾಲಿ ಇರುವ ಹುದ್ದೆಗಳು ತುಂಬುವವರೆಗೆ ಕೆಎಲ್‌ಒ ಸಂಸ್ಥೆಯವರು ತಾತ್ಕಾಲಿಕವಾಗಿ ಸಹಾಯ ಮಾಡುತ್ತಿದ್ದಾರೆ' ಎಂದರು.

# ದುರ್ಗಾದೇವಿ ಮೂರ್ತಿ ಮೆರವಣಿಗೆ



**ಕೊಪ್ಪಳ :** ತಾಲ್ಲೂಕಿನ ಮುದ್ದಾಬಳ್ಳಿ ಗ್ರಾಮದಲ್ಲಿ ನವರಾತ್ರಿಯ ಪುರಾಣ ಮಹಾ ಮಂಗಲೋತ್ಸವದ ಪ್ರಯುಕ್ತ ಶುಕ್ರವಾರ ಗ್ರಾಮದಲ್ಲಿ ಮಹಿಳೆಯರಿಂದ ಕುಂಭ, ದುರ್ಗಾದೇವಿ ಮೂರ್ತಿ ಮೆರವಣಿಗೆ ಹಾಗೂ ಅನ್ನಸಂತರ್ಪಣೆ ನೆರವೇರಿತು.

ಕಾಳಿಕಾದೇವಿಯ ದೇವಸ್ಥಾನದಿಂದ ಆರಂಭವಾದ ಕುಂಭ ಹಾಗೂ ದುರ್ಗಾದೇವಿ ಮೂರ್ತಿಯ ಮೆರವಣಿಗೆಯಲ್ಲಿ ಕಂಡುಬಂದ ಡೊಳ್ಳು, ನಂದಿಕೋಲು, ಕಂಸಾಳೆಯ ನಾದದ ಸಂಭ್ರಮ ಎಲ್ಲರಲ್ಲೂ ಉತ್ಸಾಹ ತರಿಸಿತು. ಬಳಿಕ ಪಂಚಲೋಹದ ಚಾಮುಂಡೇಶ್ವರಿ ಮೂರ್ತಿ, ಲಕ್ಷ್ಮಿದೇವಿ ಮೂರ್ತಿ ಸೇರಿದಂತೆ ವಿವಿಧ ಮೂರ್ತಿಗಳಿಗೆ ಅಭಿಷೇಕ ನಡೆಯಿತು.

ಗ್ರಾಮದ ಆದಿಶಕ್ತಿ ದ್ಯಾಮವ್ವ ದೇವಿ ದೇವಸ್ಥಾನದಲ್ಲಿ ಗೋದಿ ಪಾಯಿಸ, ಅನ್ನ ಸಂಬಾರು ಅನ್ನಸಂತರ್ಪಣೆಯು ನೆರವೇರಿತು.

11 ದಿನಗಳ ಕಾಲ ಗ್ರಾಮದಲ್ಲಿ ನವರಾತ್ರಿಯ ವೈಭವ ಜನರಲ್ಲಿ ಉತ್ಸಾಹ ತರಿಸಿತು.

# 'ಸೈಬರ್ ವಂಚನೆ: ಎಚ್ಚರ ಇರಲಿ'



**ಹುಕ್ಕೇರಿ :** ತಂತ್ರಜ್ಞಾನ ಮುಂದುವರಿದಂತೆ ಸೈಬರ್ ವಂಚನೆ ಕೂಡ ಹೆಚ್ಚುತ್ತಿದೆ. ಸಾರ್ವಜನಿಕರು ಮೊಬೈಲ್ ಹಾಗೂ ಇತರ ವಿದ್ಯುನ್ಮಾನ ಉಪಕರಣ ಬಳಸುವಾಗ ಎಚ್ಚರಿಕೆಯಿಂದಿರಬೇಕು ಎಂದು ವಕೀಲರ ಸಂಘದ ಅಧ್ಯಕ್ಷ ಕೆ.ಬಿ. ಕುರಬೇಟ ಹೇಳಿದರು.

ಸ್ಥಳೀಯ ನ್ಯಾಯಾಲಯದ ಇಲೈಬ್ರರಿಯಲ್ಲಿ ಪುಣೆಯ ಕ್ವಿಕ್ ಹೀಲ್ ಫೌಂಡೇಶನ್ ಹಾಗೂ ನಿಡಸೋಸಿಯ ಎಸ್.ಜೆ.ಪಿ.ಎನ್ ಬಿಸಿಎ ಮಹಾವಿದ್ಯಾಲಯದ ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ಸೈಬರ್ ವಂಚನೆ ಮತ್ತು ಸುರಕ್ಷತೆ ಅರಿವು' ಮೂಡಿಸುವ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಆನ್‌ಲೈನ್ ಆಟಗಳು, ವೈರಸ್ ಹಾವಳಿ, ಹಣಕಾಸು ವಂಚನೆ, ಉದ್ಯೋಗ ವಂಚನೆ, ಅಪರಿಚಿತ ಕರೆಗಳಿಗೆ ಒಟಿಪಿ ಕೊಡುವ, ಸುಳ್ಳು ಲಿಂಕ್‌ಗಳನ್ನು ಕ್ಲಿಕ್ ಮಾಡಿ ಮೋಸ ಹೋಗುವ ಕುರಿತು ಉದಾಹರಣೆ ಸಹಿತ ವಿವರಿಸಲಾಯಿತು. ಅನಕ್ಷರಸ್ಥರು ಮಾತ್ರವಲ್ಲ ಅಕ್ಷರಸ್ಥರೂ ಸೈಬರ್ ವಂಚನೆಗೆ ಒಳಗಾಗುತ್ತಿರುವುದು ಆತಂಕಕಾರಿಯಾಗಿದೆ.

ಸೈಬರ್ ವಂಚಕರಿಂದ ಜಾಗೃತರಾಗಬೇಕು ಎಂದು ವಕೀಲರಿಗೆ ಹಾಗೂ ಸಾರ್ವಜನಿಕರಿಗೆ ವಿದ್ಯಾರ್ಥಿಗಳಾದ ತ್ರಿವೇಣಿ ಪಾಟೀಲ, ಭಾಗ್ಯಶ್ರೀ ಕುರುಬರ ಸಲಹೆ ನೀಡಿ ಅರಿವು ಮೂಡಿಸಿದರು.

ವಕೀಲರ ಸಂಘದ ಅಧ್ಯಕ್ಷ ಕೆ.ಬಿ. ಕುರುಬೇಟ, ಮಾಜಿ ಅಧ್ಯಕ್ಷ ಅನೀಸ್ ವಂಟಮೂರಿ, ವಕೀಲರಾದ ಪ್ರೇಮಾ ಕರಜಗಿ, ಕೆ.ಎಲ್.ಜಿನರಾಳ, ಜಾಂಗಟಿಹಾಳಪಾಟೀಲ್, ಪ್ರಕಾಶಪಾಟೀಲ್, ವಿಠ್ಠಲ್ ಘಸ್ತಿ, ಶೀಲಯ್ಯನವರಮಠ, ಕೊಟಗಿ, ನೋಟರಿ ಎಂ.ಎಂ ಪಾಟೀಲ, ಮಂಜುನಾಥ ಗಸ್ತಿ, ಬಿಸಿಎ ಕಾಲೇಜು ಪ್ರಾಂಶುಪಾಲ ಬಸವರಾಜ ಹಾಲಭಾವಿ, ಪ್ರಾಧ್ಯಾಪಕರಾದ ಪವನ್ ಹಿರೇಮಠ, ಆನಂದ ಸೋನಾರ ಇದ್ದರು.

## ಬಸವನಗುಡಿಯ ನ್ಯಾಷನಲ್ ಎಜುಕೇಶನ್ ಸೊಸೈಟಿಯಿಂದ ಗಾಂಧಿ ಜಯಂತಿ

# ಗಾಂಧೀಜಿ ತತ್ವ ಚಿಂತನೆಗಳು ಅಜರಾಮರ: ಡಾ. ನಲ್ಲೂರು ಪ್ರಸಾದ್

**ಬೆಂಗಳೂರು:** ಮಹಾತ್ಮ ಗಾಂಧೀಜಿ ತತ್ವ, ಚಿಂತನೆಗಳು, ದೇಶಕ್ಕಾಗಿ ಮಾಡಿದ ತ್ಯಾಗ, ನೀಡಿದ ಪ್ರೇರಣೆ ಎಂದೆಂದಿಗೂ ಅಜರಾಮರ. ಅವುಗಳನ್ನು ನಾವೆಲ್ಲರೂ ಪಾಲಿಸಬೇಕು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಡಾ. ನಲ್ಲೂರು ಪ್ರಸಾದ್ ಹೇಳಿದ್ದಾರೆ.

ಬಸವನಗುಡಿಯ ನ್ಯಾಷನಲ್ ಎಜುಕೇಶನ್ ಸೊಸೈಟಿ ಆಫ್ ಕರ್ನಾಟಕದಿಂದ ಆಯೋಜಿಸಲಾದ ಮಹಾತ್ಮ ಗಾಂಧೀಜಿ ಅವರ 156ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಾತ್ಮ ಗಾಂಧೀಜಿ ಶ್ರೇಷ್ಠ ವ್ಯಕ್ತಿತ್ವದವರು. ತಮ್ಮ ತಂದೆ ಸಂಜೀವಯ್ಯ ಅವರು ಮಹಾತ್ಮ ಗಾಂಧೀಜಿ ಅವರ ಅಪ್ಪಟ ಅನುಯಾಯಿಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಅವರು ಮೂರು ವರ್ಷ ಜೈಲು ವಾಸ ಅನುಭವಿಸಿದ್ದರು. ಮಹಾತ್ಮ ಗಾಂಧೀಜಿ ಅವರೊಡನೆ ನಾಡಿನದ್ಯಂತ ಪ್ರವಾಸ ಮಾಡಿದ್ದರು ಎಂದು ಸ್ಮರಿಸಿಕೊಂಡರು.

ನಾಡೋಜ ಡಾ. ಎಚ್. ನರಸಿಂಹಯ್ಯ ಅವರು ಸಹ ಅತ್ಯುತ್ತಮ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಸ್ವಾತಂತ್ರ್ಯ ಹೋರಾಟ ನಮ್ಮೆಲ್ಲರಿಗೂ ಪ್ರೇರಣೆಯಾಗಬೇಕು. ಸ್ವಾತಂತ್ರ್ಯ ಹೋರಾಟಗಾರರು ಎಲ್ಲರಿಗೂ ದಾರಿದೀಪ ಎಂದರು.

ಎನ್.ಇ.ಎಸ್. ಸಂಸ್ಥೆಯ ಗೌರವ ಕಾರ್ಯದರ್ಶಿ ವಿ ವೆಂಕಟಶಿವಾರೆಡ್ಡಿ, ಜಂಟಿ ಕಾರ್ಯದರ್ಶಿ ಸುಧಾಕರ ಇಸ್ತೂರಿ, ಪ್ರಾಂಶುಪಾಲರಾದ ಡಾ. ಪಿ.ಎಲ್.ರಮೇಶ್, ಪಿ.ಯು.ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸೌಮ್ಯ, ನ್ಯಾಷನಲ್ ಹೈಸ್ಕೂಲ್ ಮುಖ್ಯೋಪಾಧ್ಯಾಯರಾದ ಡಾ. ವೆಂಕಟರಾಮ ಭಟ್ಟರ್, ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ವಾಸಂತಿ, ನ್ಯಾಷನಲ್ ಇಂಗ್ಲಿಷ್ ಶಾಲೆಯ ಮುಖ್ಯೋಪಾಧ್ಯಾಯರಾದ ಸುನಿತಾ ಉಪಸ್ಥಿತರಿದ್ದರು.

# ಆದಿ ಕರ್ಮಯೋಗಿ ಅಭಿಯಾನ: ಗ್ರಾಮಸಭೆ




**ಕನಕಗಿರಿ :** 'ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಆದಿ ಕರ್ಮಯೋಗಿ ಅಭಿಯಾನ ಮತ್ತು ಕಾರ್ಯಾಗಾರ ಯೋಜನೆಗೆ ಹಿರೇಖೇಡ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಹಿರೇಖೇಡ, ಮಲ್ಲಿಗೆವಾಡ ಮತ್ತು ಕೆ.ಕಾಟಾಪುರ ಒಟ್ಟು 3 ಗ್ರಾಮಗಳು ಆಯ್ಕೆಯಾಗಿವೆ' ಎಂದು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಯು.ಮಲ್ಲಿಕಾರ್ಜುನ ತಿಳಿಸಿದರು.

ತಾಲ್ಲೂಕಿನ ಹಿರೇಖೇಡ ಗ್ರಾಮದಲ್ಲಿ ಗುರುವಾರ ಆಯೋಜಿಸಿದ್ದ ವಿಶೇಷ ಗ್ರಾಮ ಸಭೆಯಲ್ಲಿ ಅವರು ಮಾತನಾಡಿದರು. 'ಈ ಗ್ರಾಮಗಳ ಬುಡಕಟ್ಟು ಜನರ ಸಮಗ್ರ ಅಭಿವೃದ್ಧಿಗೆ ಸ್ಥಳೀಯ ಜನರ ಬೇಡಿಕೆಗೆ ಅನುಗುಣವಾಗಿ ಯೋಜನೆ ಸಿದ್ಧಪಡಿಸಿ 2030ರೊಳಗೆ ಅಭಿವೃದ್ಧಿ ಹೊಂದಿದ ಗ್ರಾಮವನ್ನಾಗಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ' ಎಂದು ಅವರು ವಿವರಿಸಿದರು.

ಪರಿಶಿಷ್ಟ ಪಂಗಡ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಗ್ರಾಮಗಳಲ್ಲಿ ಸಿಸಿ ರಸ್ತೆ, ಚರಂಡಿ, ಕುಡಿಯುವ ನೀರು, ಹೈಮಾಸ್ಟ್, ವಿವಿಧ ಸಮುದಾಯ ಆಧಾರಿತ ಕಾರ್ಯಕ್ರಮಗಳನ್ನು ಆಯೋಜಿಸಿ ಅಭಿವೃದ್ಧಿ ಪಡಿಸಲಾಗುತ್ತಿದೆ' ಎಂದರು.

ಕೆ.ಕಾಟಾಪುರ, ಮಲ್ಲಿಗೆವಾಡ ಹಾಗೂ ಹಿರೇಖೇಡ ಗ್ರಾಮದಲ್ಲಿ ನಡೆದ ವಿಶೇಷ ಗ್ರಾಮ ಸಭೆಯಲ್ಲಿ ತಾ.ಪಂ. ಮಾಜಿ ಸದಸ್ಯ ಯಂಕನಗೌಡ, ಗ್ರಾ.ಪಂ.ಸದಸ್ಯ, ನಾಗನಗೌಡ, ಗ್ರಾಮ ಪಂಚಾಯಿತಿ ಸದಸ್ಯೆ ಮೀನಾಕ್ಷಿ ಮುದಿಯಪ್ಪ, ಪ್ರಮುಖರಾದ ಮುದಿಯಪ್ಪ ಖ್ಯಾಡೇದ, ಯಮನೂರಪ್ಪ, ಬಾರಿಮರ್ದಪ್ಪ ನಡಲಮನಿ ಹುಲಗಪ್ಪ ದೊಡ್ಡಮನಿ, ಸಿದ್ದಪ್ಪ ಪೊಲೀಸ್, ಬಾರಿಮರದಪ್ಪ, ಮರಿಯಣ್ಣ, ಹನುಮೇಶ, ಯಂಕೋಬ, ಗ್ರಾಮ ಪಂಚಾಯಿತಿ ಕರವಸೂಲಿಗಾರರಾದ ಹೊನ್ನೂರಪಾಷ, ರವಿಕುಮಾರ ಇದ್ದರು.

# ಗಾಂಧೀಜಿ ಮತ್ತು ಲಾಲ್ ಬಹುದ್ದೂರ ಶಾಸ್ತ್ರಿ ಜಯಂತಿ ಆಚರಣೆ



**ತಾಳಿಕೋಟೆ:** ಪಟ್ಟಣದ ಶ್ರೀ ಎಸ್ ಎಸ್ ವಿದ್ಯಾ ಸಂಸ್ಥೆಯಲ್ಲಿ ಗುರುವಾರರಂದು ಮಹಾತ್ಮ ಗಾಂಧಿಜಿ ಹಾಗೂ ಲಾಲ ಬಹಾದ್ದೂರ ಶಾಸ್ತ್ರಿಜಿಯವರ ದಿನಾಚರಣೆ ಆಚರಿಸಲಾಯಿತು.

ಮಹಾತ್ಮರ ಭಾವಚಿತ್ರಕ್ಕೆ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಎಚ್.ಎಸ್.ಪಾಟೀಲ ಅವರು ಪೂಜೆ ಸಲ್ಲಿಸಿದರು. ಆಡಳಿತಾಧಿಕಾರಿಗಳಾದ ಕಿರಣ.ಎಚ್.ಪಾಟೀಲ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಅಶೋಕ ಕಟ್ಟಿ, ಬಿಪಿಎಡ್ ಕಾಲೇಜಿನ ಪ್ರಾಚಾರ್ಯ ಶಿವಕುಮಾರ ನಾಯಕ, ಪದವಿ ಕಾಲೇಜಿನ ಸುರೇಶ ಪಾಟೀಲ, ಸಿಬ್ಬಂದಿಗಳಾದ ಎಸ್.ವಿ.ಜಾಮಗೊಂಡಿ, ಬಿ.ಐ.ಹಿರೇಹೊಳಿ, ಎಸ್.ಸಿ.ಗುಡಗುಂಟಿ, ಎಚ್.ಬಿ.ಪಾಟೀಲ, ಎಮ್.ಎಸ್.ರಾಯಗೊಂಡ, ಯು.ಎಚ್.ಗಟನೂರ, ಎಸ್.ಬಿ.ಸಾಸನೂರ. ಬಿ.ಪಿ ಕೊಣ್ಣೂರ. ಕೆ.ಎನ್.ನಾಲತವಾಡ. ಉಪಸ್ಥಿತರಿದ್ದರು.

# ಹೊರ್ತಿ ಕೆರೆಗೆ ಚಾನಲ್ ನಿರ್ಮಾಣದಿಂದ 10 ಅಡಿ ನೀರು ಇಳಿಮುಖ: ಜಿಲ್ಲಾಧಿಕಾರಿ ಡಾ. ಆನಂದ

**ವಿಜಯಪುರ :** ಜಿಲ್ಲೆಯ ಇಂಡಿ ತಾಲೂಕಿನ ಹೊರ್ತಿ ಕೆರೆಯ ಮುಂದಿರುವ ಕೃಷಿ ಜಮೀನುಗಳಿಗೆ ಮತ್ತು ಕೆರೆ ಏರಿಯ ಹಾನಿಯನ್ನು ತಡೆಯಲು ಮುನ್ನೆಚ್ಚರಿಕೆ ಕ್ರಮವಾಗಿ ಚಾನಲ್ ನಿರ್ಮಾಣ ಮಾಡಿ, ನೀರು ಹೊರಹಾಕಿರುವುದರಿಂದ ನೀರಿನ ಮಟ್ಟವು 10 ಅಡಿಗಳಷ್ಟು ಕಡಿಮೆಯಾಗಿದೆ. ಇನ್ನು ಮುಂದೆ ಯಾವುದೇ ಅಪಾಯ ಕಂಡುಬರುವುದಿಲ್ಲವೆಂದು ಜಿಲ್ಲಾಧಿಕಾರಿ ಡಾ. ಆನಂದ ಕೆ ಅವರು ತಿಳಿಸಿದ್ದಾರೆ.



ವಿಜಯಪುರ ಜಿಲ್ಲೆ ಇಂಡಿ ತಾಲೂಕಿನ ಹೊರ್ತಿ ಕೆರೆಯನ್ನು 1972 ರಲ್ಲಿ ನಿರ್ಮಾಣ ಮಾಡಲಾಗಿದ್ದು, ಈ ಕೆರೆಯ ಸಾಮರ್ಥ್ಯವು 19.50 ಎಂ.ಸಿ.ಎಫ್.ಟಿ. ಇದ್ದು, ಕೆರೆಯ ವಿಸ್ತೀರ್ಣ 18 ಹೆಕ್ಟೆರ್ ಇರುತ್ತದೆ. ಏರಿಯ ಎತ್ತರ 11 ಮೀಟರ ಹಾಗೂ ಉದ್ದ 400 ಮೀ ಇದ್ದು, ಪ್ರಸ್ತುತ ಈ ಕೆರೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇಲಾಖೆಯ ವತಿಯಿಂದ ಕೆರೆ ತುಂಬವ ಯೋಜನೆಯಡಿ ಕೆರೆ ತುಂಬಿಸಲಾಗಿರುತ್ತದೆ.

ಹೆಚ್ಚಿನಪ್ರಮಾಣದಲ್ಲಿಮಳೆಆಗಿರುವುದರಿಂದ ಈಕೆರೆಯಕೋಡಿಯಿಂದಸುಮಾರುಒಂದು ತಿಂಗಳಿಂದ ನೀರು ಹರಿದು ಹೋಗಿರುತ್ತದೆ. ಸೆಪ್ಟೆಂಬರ 28 ಸಂಜೆ 7 ಗಂಟೆಗೆ ಕೆರೆಯ ಏರಿಯಾ 30 ಮೀಟರ ಉದ್ದದಷ್ಟು ಹಾಗೂ 0.30 ಮೀಟರದಷ್ಟು ಕುಸಿದಿರುವುದು ಕಂಡು ಬಂದಿರುತ್ತದೆ. ತದನಂತರ ಕೋಡಿಯನ್ನು ಇಳಿಸಲು ಸೆಪ್ಟೆಂಬರ 29 ರಂದು ಜೆಸಿಬಿ ಮತ್ತು ಹಿಟಾಚಿ ಬ್ರೇಕರ್ ಮೂಲಕ ಹೆಚ್ಚಿನ ಪ್ರಮಾಣದಲ್ಲಿನೀರನ್ನುಹೊರಹಾಕಲುಸತತ ಮೂರು ದಿನಗಳ ಕಾಲ ಕೆರೆಯಲ್ಲಿ ಎರಡು ಅಡಿಯಷ್ಟು ನೀರನ್ನು ಇಳಿಸಲಾಯಿತು. ಆದಾಗ್ಯೂ ಕೂಡಾ ಪ್ರತಿದಿನ ನೀರಿನ ಒತ್ತಡದಿಂದಾಗಿ ಕ್ರಮೇಣವಾಗಿ ಏರಿಯು ಕುಸಿಯುವುದು ಕಂಡುಬಂದಿರುತ್ತದೆ. ಇದರಿಂದಾಗಿ ಅಕ್ಟೋಬರ 2 ರಂದು ಹೆಚ್ಚಿನ ಪ್ರಮಾಣದ ಏರಿಯ ಕುಸಿತ ಕಂಡ ಕಾರಣ ಹೊರ್ತಿ ಕೆರೆಯ ಕೆಳಭಾಗದಲ್ಲಿ ಒಟ್ಟು ಮೂರು ಕೆರೆಗಳಿದ್ದು, ಅವುಗಳು ಕೂಡಾ ಈಗಾಗಲೇ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇಲಾಖೆಯ ವತಿಯಿಂದ ಭರ್ತಿ ಮಾಡಲಾಗಿರುತ್ತದೆ. ಈ ಕೆರೆಗಳಿಗೆ ಹಾನಿಯಾಗದಂತೆ ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಸಾರ್ವಜನಿಕ ಆಸ್ತಿ ಹಾನಿ ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮವಾಗಿ ಕೆರೆಯ ಕೋಡಿಯಿಂದ ಸುಮಾರು 30 ಮೀಟರ ದೂರದಲ್ಲಿ ಹಾಗೂ ಕುಸಿತ ಕಂಡುಬಂದ ಸ್ಥಳದಿಂದ 50 ಮೀಟರ ಅಂತರದಲ್ಲಿ ಕ್ರಮೇಣವಾಗಿ ನೀರನ್ನು ಹೊರಗೆ ಹಾಕಲು ಕೃತಕವಾಗಿ ಕೆರೆಯ ಏರಿಯಲ್ಲಿ ಚಾನಲ್ ನಿರ್ಮಾಣ ಮಾಡಿ ಹಂತ ಹಂತವಾಗಿ ನೀರನ್ನು ಹೊರಹಾಕಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದಕ್ಷಿಣ ವಲಯ ರೋಲ್ ಬಾಲ್ ಕ್ರೀಡಾಕೂಟದಲ್ಲಿ ಕರ್ನಾಟಕ ಬಾಲಕಿಯರ ತಂಡಕ್ಕೆ ಬಂಗಾರ ಪದಕ



**ವಿಜಯಪುರ:** ಸೆಪ್ಟೆಂಬರ್ 28ರಂದು ಮಲ್ಲಸಂದ್ರ ಮೈದಾನದಲ್ಲಿ ಸೆಪ್ಟೆಂಬರ್ 27 ರಿಂದ 28 ರವರೆಗೆ ಕರ್ನಾಟಕ ರೋಲ್ ಬಾಲ್ ಸಂಸ್ಥೆ ಮತ್ತು ಸ್ಕೇಟಿಂಗ್ ಅಕಾಡೆಮಿಯ ಸಂಯುಕ್ತ ಆಶ್ರಯದಲ್ಲಿ ನಡೆದ 6ನೇ ದಕ್ಷಿಣ ವಲಯ ರೋಲ್ ಬಾಲ್ ಕ್ರೀಡಾಕೂಟದಲ್ಲಿ 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಕರ್ನಾಟಕ ತಂಡವು ಬಂಗಾರ ಪದಕವನ್ನು ಗೆದ್ದಿದ್ದು, ಬಾಲಕರ ವಿಭಾಗದಲ್ಲಿ ಕಂಚಿನ ಪದಕ ಪಡೆದುಕೊಂಡು ರಾಜ್ಯಕ್ಕೆ ಕೀರ್ತಿ ತಂದಿದೆ.

ಈ ಸಂದರ್ಭದಲ್ಲಿ ತಂಡದೊಂದಿಗೆ ಕರ್ನಾಟಕ ರಾಜ್ಯ ರೋಲ್ ಬಾಲ್ ಸಂಸ್ಥೆಯ ಅಧ್ಯಕ್ಷ ಪಿ ಕೆ ಭರತಕುಮಾರ, ಕಾರ್ಯದರ್ಶಿ ಚೇತನ ಬಂಡವಾಲ್ಕಾರ, ಕರ್ನಾಟಕ ತಂಡದ ತರಬೇತಿದಾರ ರವಿ ಎಸ್., ಖಜಾಂಚಿ ಮಹೇಂದ್ರಕುಮಾರ, ತರಬೇತಿದಾರರಾದ ಮಣಿಕಂಠ, ಪೃಥ್ವಿಕಾಂತ್ ಅವರು ಭಾಗವಹಿಸಿದ್ದರು ಎಂದು ವಿಜಯಪುರ ಜಿಲ್ಲಾ ರೋಲ್ ಬಾಲ ಸಂಸ್ಥೆ ಯ ಸಂಸ್ಥಾಪಕ ಪ್ರಧಾನ ಕಾರ್ಯದರ್ಶಿ ಬಸವರಾಜ ಬಾಗೇವಾಡಿ ಉತ್ನಾಳ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಳೆ ಹಾನಿ ಪ್ರದೇಶದ ಮೂಲಭೂತ ಸೌಕರ್ಯ ತ್ವರಿತವಾಗಿ ಕಲ್ಪಿಸಲು ಜಿಲ್ಲಾಧಿಕಾರಿ ಡಾ. ಆನಂದ ಅಧಿಕಾರಿಗಳಿಗೆ ಸೂಚನೆ

**ವಿಜಯಪುರ :** ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿಯೇ ಅತೀ ಹೆಚ್ಚು ಮಳೆ ನಮ್ಮ ಜಿಲ್ಲೆಯಲ್ಲಿಯಾಗಿದ್ದು ಮಳೆಯಿಂದ ಹಾನಿಗೀಡಾದ ಪ್ರದೇಶಗಳಲ್ಲಿ ಮೂಲಭೂತ ಸೌಕರ್ಯಗಳನ್ನು ತ್ವರಿತವಾಗಿ ಕಲ್ಪಿಸಲು ಕ್ರಮ ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ಆನಂದ ಕೆ. ಅವರು ಸೂಚಿಸಿದರು.




ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕಂದಾಯ ಸಚಿವ ಕೃಷ್ಣ ಭೈರೇಗೌಡ ಅವರು ವಿಡಿಯೋ ಸಂವಾದ ಮೂಲಕ ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ಸಭೆಯ ನಂತರ ಜಿಲ್ಲಾ ವಿಪತ್ತು ನಿರ್ವಹಣಾ ಸಭೆ ನಡೆಸಿದ ಜಿಲ್ಲಾಧಿಕಾರಿ ಡಾ.ಆನಂದ ಕೆ ಅವರು, ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗಿದ್ದು, ಮೂಲಭೂತ ಸೌಕರ್ಯಗಳಾದ ರಸ್ತೆ, ಶಾಲಾ ಕಟ್ಟಡ, ಅಂಗನವಾಡಿ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರುದಂತೆ ಹಾನಿಗೀಡಾದ ಪ್ರದೇಶಗಳಿಗೆ ಅಧಿಕಾರಿಗಳು ತೆರಳಿ ಪ್ರಥಮ ಆದ್ಯತೆ ನೀಡಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ವಹಿಸಬೇಕು. ಹಾನಿಗೀಡಾದ ಕಟ್ಟಡಗಳ ಸಮೀಕ್ಷೆ ಕಾರ್ಯ ಕೈಗೊಂಡು ಜಿ.ಪಿ.ಎಸ್ ಪೋಟೊ ಸಮೇತ ವರದಿ ಸಲ್ಲಿಸಬೇಕು. ಚೆಕ್ ಡ್ಯಾಮ್‌ಗಳು, ಸಣ್ಣ ಸಣ್ಣ ಬಾಂದಾರಗಳು, ಕೆರೆ ಕಟ್ಟೆಗಳ ದುರಸ್ತಿಗೆ ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ನದಿತೀರದ ಗ್ರಾಮಗಳಲ್ಲಿ ಪ್ರವಾಹ ಉಂಟಾಗಿ ಸಾರ್ವಜನಿಕರಿಗೆ ತೊಂದರೆಯಾಗಿದ್ದು, ಹಾನಿಗೀಡಾದ ಮೂಲಭೂತ ಸೌಕರ್ಯಗಳನ್ನು ತ್ವರಿತ ಗತಿಯಲ್ಲಿ ಕೈಗೊಳ್ಳಲಾಗುತ್ತಿದೆ ಪ್ರವಾಹದಿಂದ ತೊಂದರೆಗೊಳಗಾದ ಗ್ರಾಮಗಳಲ್ಲಿ ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ. ಜಿಲ್ಲೆಯಲ್ಲಿ ಅಂದಾಜು 2 ಲಕ್ಷದ 45 ಸಾವಿರ ಹೆಕ್ಟೆರೆಯಷ್ಟು ಬೆಳಹಾನಿದೆ ಅಂದಾಜಿಸಲಾಗಿದೆ.

ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಸಮೀಕ್ಷೆ ಕೈಗೊಂಡು ನಿಖರವಾದ ಬೆಳೆ ಹಾನಿಯ ಮಾಹಿತಿ ನೀಡುವಂತೆ ಅವರು ಸೂಚಿಸಿದರು.

ಜಿಲ್ಲೆಯ ಪಟ್ಟಣ ಪಂಚಾಯತಿ, ಪುರಸಭೆ, ನಗರಸಭೆ ಹಾಗೂ ನಗರಗಳಲ್ಲಿ ಮಳೆಯಿಂದ ಹಾನಿಯಾದ ಮನೆಗಳ ಸಮೀಕ್ಷೆ ಕಾರ್ಯ ಕೈಗೊಂಡು 30ಕ್ಕಿಂತ ಹೆಚ್ಚು ಪ್ರತಿಶತ ಹಾನಿಗೊಳಗಾದ ಮನೆಗಳನ್ನು ಗುರುತಿಸಿ, ಜಿ.ಪಿ.ಎಸ್ ಪೋಟೊ ಸಮೇತ ನಿಖರವಾದ ಮಾಹಿತಿ ನೀಡುವಂತೆ ಸೂಚಿಸಿದರು. ಯಾವುದೇ ಕಾರಣಕ್ಕೂ ಜನರಿಗೆ ತೊಂದರೆಯಾಗದಂತತೆ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕು ಎಂದು ಅವರು ತಿಳಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಿಷಿ ಆನಂದ, ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ, ಮಹಾನಗರ ಪಾಲಿಕೆ ಆಯುಕ್ತ ವಿಜಯಕುಮಾರ ಮೆಕ್ಕಳಕಿ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬದ್ರುದ್ದೀನ ಸೌದಾಗರ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ವಿನಯಕುಮಾರ ಪಾಟೀಲ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಕೆ.ಕೆ ಚವ್ಹಾಣ, ಪಶು ಸಂಗೋಪನ ಇಲಾಖೆಯ ಉಪ ನಿರ್ದೇಶಕ ಅಶೋಕ ಘೋಣಸಗಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸಂಪತ ಗುಣಾರಿ, ಜಂಟಿ ಕೃಷಿ ನಿದೇಶಕ ಶಿವನಗೌಡ ಪಾಟೀಲ್, ತೋಟಗಾರಿಕೆ ಇಲಾಖೆಯ ಉಪ ನಿರ್ದೇಶಕ ರಾಹುಲ್ ಕುಮಾರ ಬಾವಿದೊಡ್ಡಿ, ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

## ಗಾಂಧಿಜೀ ಅಹಿಂಸೆಯ ಮಹತ್ವಸಾರಿದರು: ಶಾಸ್ತ್ರೀಜಿಯವರು ಪ್ರಾಮಾಣಿಕತೆ ತತ್ವಸಾರಿದರು: ಡಾ.ವೀರಣ್ಣ ಚರಂತಿಮಠ



**ಬಾಗಲಕೋಟೆ:** ದೇಶದ ಸ್ವಾತಂತ್ರ್ಯಕ್ಕೆ ದಂಡಿ ಸತ್ಯಾಗ್ರಹ, ಸ್ವದೇಶಿ ಚಳುವಳಿಗಳ ಹೋರಾಟದ ರೂವಾ-ರಿ,ಮಹತ್ಮಾ ಗಾಂಧಿಜಿಯವರು ಸ್ವಚ್ಚತೆ ಹಾಗೂ ಅಹಿಂಸಾ ಮಹತ್ವ ಸಾರಿದರು, ಲಾಲ್ ಬಹದ್ದೂರ ಶಾಸ್ತ್ರಿಜಿಯವರು ಪ್ರಾಮಾಣಿಕತೆಯ ತತ್ವಸಾರಿದರು ಎಂದು ಮಾಜಿ ಶಾಸಕ ಡಾ. ವೀರಣ್ಣ ಚರಂತಿಮಠ ಹೇಳಿದರು.

ಅವರು ನಗರದ ಶಿವಾನಂದ ಜೀನಲ್ಲಿರುವ ಬಿಜೆಪಿ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಾರ್ಟೀ ಬಾಗಲಕೋಟೆ ಮತಕ್ಷೇತ್ರದಿಂದ ಹಮ್ಮಿಕೊಂಡ ಮಹಾತ್ಮಾ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ ಶಾಸ್ತ್ರಿಜಿ ಜಯಂತಿನಿಮಿತ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚಣೆ ಮಾಡಿ ಗೌರವ ನಮನ ಸಲ್ಲಿಸಿ ಮಾತನಾಡಿದರು.

ದಂಡಿ ಸತ್ಯಾಗ್ರಹ, ಕ್ವಿಟ್ ಇಂಡಿಯಾ, ಸ್ವದೇಶಿ ಚಳುವಳಿಯಂತಹ ಅನೇಕ ಹೋರಾಟಗಳ ರೂವಾರಿ, ಜೀವನದಲ್ಲಿ ಸತ್ಯ, ಅಹಿಂಸೆ, ಸ್ವಚ್ಛತೆಯ ಮಹತ್ವವನ್ನು ರಾಷ್ಟ್ರಪಿತ ಮಹಾತ್ಮ ಗಾಂಧಿಹಿಯವರು ಸಾರಿದರು, ದೇಶಕ್ಕೆ ಜೈ ಜವಾನ ಜೈ ಕಿಸಾನ್ ಎಂಬ ಸಂದೇಶ ಸಾರಿದ ಲಾಲ್ ಬಹದ್ದೂರ ಶಾಸ್ತ್ರಿ-ಜಿಯವರ ಪ್ರಾಮಾಣಿಕತೆಯ ಆಡಳಿತ ಎಲ್ಲರಿಗೂ ಆದರ್ಶ ಎಂದರು. ಕಾರ್ಯಕ್ರಮದಲ್ಲಿ ಡಾ.ಎಂ. ಎಸ್.ದಡ್ಡೆನ್ನವರ, ಗುಂಡುರಾವ ಶಿಂಧೆ. ಬಸವರಾಜ ಯಂಕಂಚಿ, ಶಿವಾನಂದ ಟವಳಿ, ಸತ್ಯನಾರಾಯಣ ಹೆಮಾದ್ರಿ, ಬಸವರಾಜ ಹುನಗುಂದ.ಶ್ರೀಧರ ನಾಗರಬೆಟ್ಟ ಸೇರಿದಂತೆ ಅನೇಕರು ಭಾಗವಹಿಸಿದ್ದರು.

## ದಸರಾ ಆಯುಧ ಪೂಜೆ: ಉತ್ತಮ ಚಾಲನೆ ಹಾಗೂ ನಿರ್ವಹನೆ ಮಾಡಿದ ಚಾಲಕರಿಗೆ ಸನ್ಮಾನ: ಮೃತರ ಕುಟುಂಬಕ್ಕೆ ಸಹಾಯಧನ



**ಬಾಗಲಕೋಟೆ:** ಬಿ.ವಿ.ವಿ.ಸಂಘದ ಅಟೋಮೊಬೈಲ್ ವಿಭಾಗದಿಂದ ಸಂಘದ ಎಲ್ಲ ವಾಹನಗಳಿಗೆ ಶೃದ್ಧಾಭಕ್ತಿಪೂರ್ವಕ ಸಂಭ್ರಮದಿಂದ ಪೂಜೆ ಸಲ್ಲಿಸುವ ಮೂಲಕ ಆಯುಧ ಪೂಜೆಯನ್ನು ನೆರವೇರಿಸಲಾಯಿತು. ಬಿವಿವಿ ಸಂಘದ ಆಟದ ಮೈದಾನದಲ್ಲಿ ಎಲ್ಲ ವಾಹನಗಳಿಗೆ ಹಾಗೂ ಬೀಳೂರು ಶ್ರೀ ಗುರುಬಸವ ಸ್ವಾಮಿಗಳ ಪುತ್ಥಳಿಗೆ ಪೂಜೆ ಸಂಘದ ಕಾರ್ಯಾದ್ಯಕ್ಷರಾದಡಾ.ವೀರಣ್ಣಚರಂತಿಮಠಅವರು ಪೂಜೆ ಸಲ್ಲಿಸಿದರು. ಇದೇ ಸಂದರ್ಭದಲ್ಲಿ ವಾಹನ ಚಾಲಕರಾಗಿ ಅಕಾಲಿಕ ಮರಣ ದೊಂದಿದ ನಿಮಿತ್ಯ ದಿ,ರಾಮಸ್ವಾಮಿ ಹೆಳವರ ಅವರ ಧರ್ಮಪತ್ನಿಯವ-ರಿಗೆ ವಾಹನ ಸಮಿತಿಯಿಂದ ಸಹಾಯಧನವನ್ನು ವಿತರಿಸಿದರು, ನಂತರ ಉತ್ತಮ ಚಾಲನೆ ಹಾಗೂ ನಿರ್ವಹನೆ ಮಾಡಿದ 25ಕ್ಕೆ ಹೆಚ್ಚು ಚಾಲಕರನ್ನು ಗುರುತಿಸಿ ಅವರರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ಅಶೋಕರೇಣುಕಪ್ಪ,ಜಿ.ಎನ್.ಪಾಟೀಲ,ಗುರುಬಸವ ಸೂಳಿಬಾವಿ, ಮಹಾಂತೇಶ ಶೆಟ್ಟರ, ಮಲ್ಲಿಕಾರ್ಜುನ ಸಾಸನೂರ, ಕುಮಾರ ಜಿಗಜಿನ್ನಿ, ಪ್ರಭುಸ್ವಾಮಿ ಚರಂತಿಮಠ, ಕುಮಾರಸ್ವಾಮಿ ಹಿರೇಮಠ, ಸೇ-ರಿದಂತೆ ಸಂಘದ ಸದಸ್ಯರು ಭಾಗವಹಿಸಿದ್ದರು.

ಇದಕ್ಕೂ ಮುಂಚೆ ಸಂಘದ ಬಸವಲಿಂಗ ಆಫ್‌ಸೇಟ್ ಪ್ರಿಂಟರ್ಸ ಪ್ರೇಸ್‌ನಲ್ಲಿ ಲಕ್ಷ್ಮೀ ಪೂಜೆ ಹಾಗೂ ಆಯುಧ ಪೂಜೆ ಸಲ್ಲಿಸಲಾಯಿತು.

## ಸ್ವಾವಲಂಭಿ ಸಾಲಮುಕ್ತ ರೈತರಾಗಬೇಕು ಎನ್ನುವುದೇ ರೈತ ಸಂಘದ ಸಿದ್ದಾಂತ: ಸಂಗಮೇಶ ಸಗರ

# ಜಾತಿ ಮತ ಪಕ್ಷ ಪಂಗಡ ಮರೆತು ರೈತರೆಲ್ಲರೂ ಒಂದಾಗಲು ಕರೆ



**ವಿಜಯಪುರ :** ಈ ನಾಡಿನಲ್ಲಿ ಎಲ್ಲರೂ ರೈತರನ್ನು ಬಡೆದು ತಿನ್ನುತ್ತಿದ್ದಾರೆ, ಚುನಾವಣಾ ಸಂದರ್ಭದಲ್ಲಿ ನಾನು ರೈತರ ಮಗ ಎಂದು ಮತ ಪಡೆದು ಆರೆಸಿ ಬಂದು ನಂತರ ಹಣ ಮಾಡುವುದು ಅಷ್ಟೇ ಮೂಲ ಉದ್ದೇಶವಿಟ್ಟು ರೈತರನ್ನು ಸುಲಿಗೆ ಮಾಡುವುದು ನಮ್ಮ ಚುನಾಯಿತ ಪ್ರತಿನಿಧಿಗಳ ಕೆಲಸವಾಗಿದೆ, ಆದ್ದರಿಂದ ರೈತರೆಲ್ಲರು ಜಾತಿ, ಮತ, ಪಕ್ಷ, ಬಡವ, ಶ್ರೀಮಂತ ಎನ್ನುವ ಬೇಧಬಾವ ಮಾಡದೇ ಒಂದಾಗಬೇಕು ಅಂದಾಗ ಮಾತ್ರ ರೈತ ಆತ್ಮಹತ್ಯೆಯನ್ನು ತಡೆಯಬಹುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಜಿಲ್ಲಾಧ್ಯಕ್ಷರಾದ ಸಂಗಮೇಶ ಸಗರ ಅವರು ಮಾತನಾಡಿದರು.

ವಿಜಯಪುರ ತಾಲೂಕಿನ ಆಹೇರಿ ತಾಂಡಾ ನಂಬರ 1 ರಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ಚುನ್ನಪ್ಪಾ ಪೂಜೇರಿ ಬಣದ ಗ್ರಾಮಘಟಕ ಉದ್ಘಾಟನೆ, ಶಾಲುದೀಕ್ಷೇ ಹಾಗೂ ಗುರುತಿನ ಚೀಟಿ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈಗಾಗಲೇ ಜಿಲ್ಲೆಯಲ್ಲಿ ಆಲಿಮಟ್ಟಿ ಜಲಾಶಯಕ್ಕೆ, ಕುಡಗಿ-ಎನ್.ಟಿ.ಪಿ.ಸಿ, ಮುಳವಾಡ ಕೈಗಾರಿಕಾ ಪ್ರದೇಶಕ್ಕೆ, ಸಾವಿರಾರು ವಿಂಡ್ ಪ್ಯಾನ್, ಸಾವಿರಾರು ಎಕರೆ ಸೋಲಾರ ವಿದ್ಯುತ್ ಘಟಕ, ಸೇ-ರಿದಂತೆ 20 ಕ್ಕೂ ಅಧಿಕ ಏತನೀರಾವರಿ ಕಾಲುವೆಗಳಿಗೆ ಹಾಗೂ ವಿಮಾನ ನಿಲ್ದಾಣ-ಕ್ಕೆ, ವೈನ್ ಪಾರ್ಕಗೆ, ಪುಡ್ ಪಾರ್ಕ ಸೇ-ರಿದಂತೆ ಇನ್ನು ಹಲವಾರು ಯೋಜನೆಗಳಿಗೆ ಲಕ್ಷಾಂತರ ಎಕರೆ ಫಲವತ್ತಾದ ಕೃಷಿ ಭೂಮಿ ಕಳೆದುಕೊಂಡು ನಮ್ಮ ಪೂರ್ವಿಕರ ಸಮಾಧಿ, ಮಠ ಮಾನ್ಯಗಳು ಹಾಗೂ ನಮ್ಮ ಮನೆಗಳನ್ನು ಕಳೆದುಕೊಂಡಿದ್ದೇವೆ, ಮುಂದೆ ಒಂದು ಎಕರೆ ಭೂಮಿ ಕೋಟಿಗೂ ಅಧಿಕ ಬೆಲೆ ಬಾಳುತ್ತದೆ, ಆದ್ದರಿಂದ ಯಾವ ರೈತರು ಭೂಮಿ ಮಾರಿಕೊಳ್ಳಬೇಡಿ, ಎಲ್ಲರೂ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಹಲವಾರು ಯೋಜನೆಗಳನ್ನು ಉಪಯೋಗ ಪಡೆದುಕೊಂಡು ಕಡಿಮೆ ಭೂಮಿಯಲ್ಲಿ ಹೆಚ್ಚು ಆದಾಯ ಪಡೆಯುವುದರ ಜೊತೆಗೆ ಸಂಘಟಿತರಾಗಿ ಸಮಗ್ರ ಕೃಷಿ ಮಾಡಿ ರೈತರೆಲ್ಲರೂ ಶ್ರೀಮಂತರಾಗಬೇಕು ಇದಕ್ಕಾಗಿ ರೈತ ಸಂಘ ನಿರಂತರ ಪ್ರಯತ್ನ ಮಾಡುತ್ತಾ ಹಲವಾರು ಕಾರ್ಯಾಗಾರ ತರಬೇತಿ ಹಮ್ಮಿಕೊಂಡು ರೈತರನ್ನು ಜಾಗೃತ ಮಾಡುತ್ತಿದ್ದೇವೆ ಇದರ ಲಾಭವನ್ನು ಎಲ್ಲ ರೈತ ಬಾಂಧವರು ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದ ಸಾನಿಧ್ಯ ವಹಿಸಿದ ಪ.ಪೂ. ಸಂಜು ಮಹಾರಾಜರು ಆಶಿರ್ವಾದ ನೀಡಿ ಮಾತನಾಡುತ್ತಾ ತಾಂಡಾಗಳಲ್ಲಿ ಹತ್ತಾರು ಎಕರೆ ಕೃಷಿ ಭೂಮಿ ಇದ್ದು ಮಹಾರಾಷ್ಟ್ರಕ್ಕೆ ದುಡಿಯಲು ಹೋಗುತ್ತಿರುವ ಸರ್ವರಿಗೂ ಕೀವಿ ಮಾತು ಹೇಳಿ ಕೃಷಿಯ ಜೊತೆಗೆ ಉಪಕಸುಬುಗಳನ್ನು ಮೈಗೂಡಿಸಿಕೊಂಡು ಕೃಷಿಯಲ್ಲಿಮಿಶ್ರಬೆಳೆಬೆಳೆಯುವುದರಜೊತೆಗೆ ಕುರಿ.ಕೋಳಿ. ಮೀನು, ಸಾಕಿ ಅದರಿಂದಲು ಲಾಭ ಪಡೆಯಬೇಕು, ಸರಕಾರದಿಂದ ಬರುವ ಎಲ್ಲ ಯೋಜನೆಗಳನ್ನು ಆಧುನಿಕ ತಂತ್ರಜ್ಞಾನಗಳನ್ನು ಮೈಗೂಡಿಕೊಂಡು ಹೆಚ್ಚಿನ ಲಾಭ ಪಡೆಯಬೇಕು ಗುಂಪು ಕೃಷಿ ಮಾಡುತ್ತಾ ಒಬ್ಬರಿಗೊಬ್ಬರು ಸಹಾಯ ಮಾಡಿ ಕರ್ಚು ಕಡಿಮೆ ಮಾಡಿ ಲಾಭ ಪಡೆಯಬೇಕು, ಇದಕ್ಕಾಗಿ ಎಲ್ಲ ರೈತರೂ ಸಂಘಟಿತರಾಗಬೇಕು ಅಂದಾಗ ಬೇರೆ ಕಡೆ ಗುಳೆಹೋಗಿದುಡಿಯುವುದುತಪ್ಪತ್ತದೆನಮ್ಮ ಜಮೀನಿನಲ್ಲಿ ನಾವೇ ಮಾಲಿಕರಾಗಬಹುದು ಎಂದರು

ಈ ವೇಳೆ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರಾಮನಗೌಡ ಪಾಟೀಲ, ಕಾರ್ಯಾಧ್ಯಕ್ಷರಾದ ಪ್ರಕಾಶ ತೇಲಿ, ತಾಲೂಕಾ ಅಧ್ಯಕ್ಷರಾದ ಅನಮೇಶ ಜಮಖಂಡಿ, ತಾಲೂಕಾ ಉಪಾಧ್ಯಕ್ಷರಾದ ಬಸಗೊಂಡಪ್ಪ ತೇಲಿ, ನಾಗಠಾಣ ಹೋಬಳಿ ಅದ್ಯಕ್ಷರಾದ ರಾಮಸಿಂಗ ರಜಪೂತ, ಆಹೇರಿ ಗ್ರಾಮ ಘಟಕದ ಅಧ್ಯಕ್ಷರಾದ ಶಂಕರಗೌಡ ಬಿರಾದಾರ, ಮಾತನಾಡಿದರು. ಈ ವೇಳೆ 70 ಕ್ಕೂ ಅಧಿಕ ನೂತನ ರೈತ ಸಂಘದ ಪದಾಧಿಕಾರಿಗಳಿಗೆ ಶಾಲುದೀಕ್ಷೆ ಮಾಡಿ ಗುರುತಿನ ಚೀಟಿ ವಿತರಣೆ ಮಾಡಿ ಪ್ರಸಾದ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಯೇಸು ಪೂಜಾರಿ, ತಿಪ್ಪಣ್ಣ ನಾಟಿಕಾರ, ಬಸವರಾಜ ಮಸೂತಿ, ತಿಪ್ಪರಾಯ ಬೈರೊಡಗಿ, ಆತ್ಮಾನಂದ ಬೈರೋಡಗಿ, ಶೆಟ್ಟು ಜಾಧವ, ರಾಜಕುಮಾರ ಜಾಧವ, ಬಾವುಸಿಂಗ ಜಾಧವ, ರಾಜು ಜಾಧವ, ರವಿ ರಾಠೋಡ, ಗಣೇಶ ಜಾಧವ, ಅನೀಲ ಜಾಧವ, ಅಶೋಕ ಜಾಧವ, ಸೇ-ರಿದಂತೆ ನೂರಾರು ಪದಾಧಿಕಾರಿಗಳು ಹಾಗೂ ಅನೇಕ ರೈತರು ಉಪಸ್ಥಿತರಿದ್ದರು.

# ದೇವಿಯ ಪುರಾಣ ಪ್ರವಚನ ಕೇಳುವುದರಿಂದ ಮಾನಸಿಕ ನೆಮ್ಮದಿ



**ಹಳ್ಳೂರ :** ನವರಾತ್ರಿಯಲ್ಲಿ ದೇವಿಯ ಪುರಾಣ ಪ್ರವಚನ ಭಕ್ತಿಯಿಂದ ಕೇಳುವುದ-ರಿಂದ ಮಾನಸಿಕ ನೆಮ್ಮದಿ ದೊರೆತು ಸುಖ ಸಮೃದ್ಧಿ ಜೀವನವು ನೆಮ್ಮದಿಯಿಂದ ಬದುಕಲು ಸಾಧ್ಯ ಎಂದು ಕಪರಟ್ಟಿ ಬಸವರಾಜ ಸ್ವಾಮೀಜಿ ಅವರು ಹೇಳಿದರು.

ಅವರು ಗ್ರಾಮದ ಶ್ರೀ ದ್ಯಾಮವ್ವ ದೇವಿ ದೇವಸ್ಥಾನದಲ್ಲಿ 10 ದಿವಸಗಳ ಕಾಲ ನಡೆದ ಶ್ರೀ ದೇವಿ ಪುರಾಣ ಕಾರ್ಯಕ್ರಮ ಸಮಾರೋಪ ಸಮಾರಂಭದಲ್ಲಿ ದಿವ್ಯ ಸಾನಿಧ್ಯವಹಿಸಿಮಾತನಾಡಿನವರಾತ್ರಿಉತ್ಸವ ಆಚರಣೆಯಲ್ಲಿ ದುರಾಲೋಚನೆಗಳನ್ನು ಹೊಡೆದೋಡಿಸಿ ಪರಾಶಕ್ತಿಯಾದ ದೇವಿಯನ್ನು ಪೂಜಿಸಿ ಧ್ಯಾನಿಸಿ ಪುಣಿತರಾಗಿರಿ.ಮಹಾತ್ಮರ ಮಾತುಗಳನ್ನು ಕೇಳಿ ಜೀವನದಲ್ಲಿ ಅಳವಡಿಸಿಕೊಂಡು ಮಾನವ ಜನ್ಮ ಉದ್ದಾರ ಮಾಡಿಕೊಳ್ಳಿರೆಂದು ಹೇಳಿದರು.

ಸಾನಿಧ್ಯ ವಹಿಸಿದ ಹೊಸ ಯರಗುದ್ರಿ ಈರಾ ಲಿಂಗೇಶ್ವರ ಮಠದ ಸಿದ್ದಪ್ರಭು ಶಿವಾಚಾರ್ಯ ಸ್ವಾಮೀಜಿ ಮಾತನಾಡಿ ಪರೋಪಕಾರ ಮನೋಭಾವನೆಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಸ್ತಿ ಅಂತಸ್ತು, ಅಧಿಕಾರ ಕ್ಷಣಿಕ ಸ್ತಿರವಲ್ಲ ನಾನೆಂಬ ಅಹಂಕಾರ ಒಳ್ಳೆಯದಲ್ಲ ನರ ಮಾನವರಿಂದ ಏನು ನಡೆಯಲು ಸಾಧ್ಯವಿಲ್ಲ ದೇವರ ಕೃಪೆಯಿಂದ ಎಲ್ಲವೂ ನಡೆಯುತ್ತದೆ. ರಾಕ್ಷಸ ಕುಲದವರು ಎಷ್ಟೇ ತೊಂದರೆ ನೀಡುತ್ತಿದ್ದರೆ ದೇವರ ನಾಮಸ್ಮರಣೆ ಪುರಾಣ ಪ್ರವಚನ ಕೇಳುವುದರಿಂದ ದುಷ್ಟ ಶಕ್ತಿಗಳನ್ನು ಮೂಲೆಗುಂಪು ಮಾಡುವುದು ದೈವಿಶಕ್ತಿಯಲ್ಲಿ ಅಡಗಿದೆ ಎಂದು ಹೇಳಿದರು.

ಶ್ರೀ ಬಸವರಾಜ ಸ್ವಾಮೀಜಿಗಳು ಹಾಗೂ ಸಿದ್ದಪ್ರಭೂ ಶಿವಾಚಾರ್ಯ ಸ್ವಾಮೀ-ಜಿಗಳಿಗೆ ಕಿರೀಟ ದಾರಣೆ ಮಾಡಿ ಸನ್ಮಾನಿಸಿ ಗೌರವಿಸಲಾಯಿತು.

ದೇವಿಯ ವೇಷ ಭೂಷಣ ಧರಿಸಿದ ನೂರಾರು ಮುದ್ದು ಮಕ್ಕಳಿಗೆ ಹಾಗೂ ಸಹಸ್ರಾರು ಮುತ್ತೈದೆ ಹೆಣ್ಣು ಮಕ್ಕಳಿಗೆ ಊಡಿ ತುಂಬಿದರು.ಸರ್ವರಿಗೂ ಮಹಾ ಪ್ರಸಾದ ವ್ಯವಸ್ಥೆ ನಡೆಯಿತು.

ಕಾರ್ಯಕ್ರಮವನ್ನು ಮುರಿಗೆಪ್ಪ ಮಾಲಗಾರ ಸ್ವಾಗತಿಸಿ,ನಿರೂಪಿಸಿ, ಚನ್ನಪ್ಪ ಬಡಿಗೇರ ವಂದಿಸಿದರು.ಗ್ರಾಮದ ಗುರು ಹಿರಿಯರ, ಕಮಿಟಿ, ಅರ್ಚಕರ ಸಮ್ಮುಖದಲ್ಲಿ ಕಾರ್ಯಕ್ರಮವೂ ನೆರವೇರಿತು.

# ಮಕ್ಕಳ ಪೌಷ್ಟಿಕ ಆಹಾರದ ಗೋಧಿ ಹಳ್ಳದ ಪಾಲು



**ಕುಷ್ಟಗಿ:** ಮಹಿಳೆಯರು ಮತ್ತು ಅಂಗನವಾಡಿ ಮಕ್ಕಳ ಅಪೌಷ್ಟಿಕತೆ ನಿವಾರಣೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಬಿಡುಗಡೆಯಾಗಿದ್ದ ಗೋಧಿ ಮೂಟೆಗಳನ್ನು ಸಮೀಪದ ಕುರುಬನಾಳ ಹಳ್ಳದಲ್ಲಿ ಬಿಸಾಡಿದ್ದು ಸಾಕಷ್ಟು ಪ್ರಮಾಣದ ಗೋಧಿ ಹಳ್ಳದಲ್ಲಿ ಹರಿಯುತ್ತಿದ್ದುದು ಶುಕ್ರವಾರ ಕಂಡುಬಂದಿದೆ.

ಚೀಲಗಳ ಮೇಲೆ ಕುಷ್ಟಗಿ ಎಂಎಸ್‌ಪಿಟಿಸಿ ಎಂದು ಸ್ಪಷ್ಟವಾಗಿ ನಮೂದಿಸಲಾಗಿದ್ದ ಗೋಧಿ ಚೀಲಗಳು ಹಳ್ಳದಲ್ಲಿ ಬಿಸಾಡಿದ್ದನ್ನು ಸಾರ್ವಜನಿಕರು ಪೊಟೊ, ವಿಡಿಯೊ ಸಹಿತ ಮಾಹಿತಿ ನೀಡಿದ್ದರು. ಈ ವಿಷಯ ಕುರಿತು ಮಾಹಿತಿಗಾಗಿ 'ಪ್ರಜಾವಾಣಿ' ಶಿಶು ಅಭಿವೃದ್ಧಿ ಯೋಜನಾಧಿಕಾರಿ ಯಲ್ಲಮ್ಮ ಹಂಡಿ ಅವರನ್ನು ಸಂಪರ್ಕಿಸಿದ ಅರ್ಧ ಗಂಟೆಯಲ್ಲಿ ಚೀಲಗಳು ಹಳ್ಳದಿಂದ ಮಾಯವಾಗಿದ್ದು ಅಚ್ಚರಿ ಮೂಡಿಸಿತು. ಆದರೆ ಗೋಧಿ ಮಾತ್ರ ಹಳ್ಳದ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದುದು ನಂತರ ಆಹಾರ ಇಲಾಖೆಯವರು ಭೇಟಿ ನೀಡಿದಾಗ ಕಂಡುಬಂದಿತು.

ಈ ಕುರಿತು ಮೊದಲು ಪ್ರತಿಕ್ರಿಯಿಸಿದ್ದ ಸಿಡಿಪಿಒ, ಅದು ಸಮಗ್ರ ಶಿಶು ಅಭಿವೃದ್ಧಿ ಯೋಜನೆಯ ಮಹಿಳಾ ಪೂರಕ ಪೌಷ್ಟಿಕ ಆಹಾರ ತಯಾರಿಕಾ ಕೇಂದ್ರಕ್ಕೆ (ಎಂಎಸ್‌ಪಿಟಿಸಿ) ಸೇರಿದ ಚೀಲಗಳಾಗಿದ್ದು ಅಂಗನವಾಡಿಗೆ ಸೇರಿದವು ಅಲ್ಲ. ಸ್ಥಳ ಪರಿಶೀಲಿಸಿ ಮಾಹಿತಿ ನೀಡುವುದಾಗಿ ಹೇಳಿದ್ದರು. ಆದರೆ ನಂತರ ಹತ್ತಾರು ಬಾರಿ ಸಂಪರ್ಕಿಸಿದರೂ ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ. ಚೀಲಗಳನ್ನು ವ್ಯವಸ್ಥಿತ ರೀತಿಯಲ್ಲಿ ನಾಪತ್ತೆ ಮಾಡಲಾಗಿತ್ತು. ಆದರೆ ಚೀಲಗಳನ್ನು ಖಾಲಿ ಮಾಡಿದ್ದರೆ ಸಾಕಷ್ಟು ಪ್ರಮಾಣದ ಗೋಧಿ ಮಾತ್ರ ಹಳ್ಳದಲ್ಲಿ ಹರಿಯುತ್ತಿದ್ದುದು ಸ್ಥಳಕ್ಕೆ ಭೇಟಿ ನೀಡಿದಾಗ ಕಂಡುಬಂದಿತು.


ಈ ಕುರಿತು ವಿವರಿಸಿದ ಕೇಂದ್ರದ ಸಿಬ್ಬಂದಿ ಸಂಗಮೇಶ, 'ಕೆಲ ವರ್ಷಗಳಿಂದಲೂ ಗೋಧಿ ಚೀಲಗಳು ಗೋಣಿ ಚೀಲದಲ್ಲಿ ಸರಬರಾಜು ಆಗುತ್ತಿದ್ದು ಪ್ಲಾಸ್ಟಿಕ್ ಚೀಲದಲ್ಲಿ ಬರುವುದಿಲ್ಲ. ಹಳ್ಳದಲ್ಲಿನ ಚೀಲಗಳು ಯಾವವು ಗೊತ್ತಿಲ್ಲ ಎಂದರು. ಬಳಕೆ ಮಾಡದ ಕಾರಣ ಹಾಳಾಗಿದ್ದ ಸ್ಥಿತಿಯಲ್ಲಿದ್ದ ಹತ್ತಾರು ಚೀಲಗಳಷ್ಟು ಗೋಧಿ ಹಳ್ಳದ ನೀರಿನಲ್ಲಿ ಹೋಗುತ್ತಿದ್ದುದು ಸ್ಥಳಕ್ಕೆ ಭೇಟಿ ನೀಡಿದಾಗ ಕಂಡುಬಂದಿತು.

ಈ ವಿಷಯ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಆಹಾರ ಇಲಾಖೆ ಶಿರಸ್ತೆದಾರ ಚನ್ನಬಸಪ್ಪ, ಆಹಾರ ನಿರೀಕ್ಷಕ ರಮೇಶ ತಾಳಕೇರಿ ಗೋಧಿಯ ಮಾದರಿ ಸಂಗ್ರಹಿಸಿದರು. ಈ ವಿಷಯದ ಬಗ್ಗೆ ಮೇಲಧಿಕಾರಿಗಳಿಗೆ ವರದಿ ಸಲ್ಲಿಸುವುದಾಗಿ ತಿಳಿಸಿದರು.

ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಅಪೌಷ್ಟಿಕ ಮಕ್ಕಳ ಸಂಖ್ಯೆ ಹೆಚ್ಚಿದ್ದು ಅದರ ನಿವಾರಣೆಗೆ ಸರ್ಕಾರ ಶಿಶು ಅಭಿವೃದ್ಧಿ ಯೋಜನೆ ಮೂಲಕ ಅಂಗನವಾಡಿಗಳಲ್ಲಿನ ಮಕ್ಕಳಿಗೆ ಪೂರಕ ಪೌಷ್ಟಿಕ ಆಹಾರ ಒದಗಿಸುತ್ತಿದೆ. ಸಿದ್ಧರೂಪದ ಈ ಪೌಷ್ಟಿಕ ಆಹಾರ ಉತ್ಪನ್ನಗಳನ್ನು ಎಂಎಸ್‌ಪಿಟಿಸಿ ಘಟಕದ ಮೂಲಕ ಅಂಗನವಾಡಿಗಳಿಗೆ ತಲುಪಿಸಲಾಗುತ್ತದೆ. ಹಿಂದೆ ಈ ಗೋಧಿ ಈ ಘಟಕಕ್ಕೆ ಬರುತ್ತಿತ್ತು. ಈಗ ಮೌಲ್ಯವರ್ಧನೆಗೊಂಡ ಗೋಧಿ ಮೂಲದ ಪೂರಕ ಆಹಾರ ಎಂಎಸ್‌ಪಿಟಿಸಿಗೆ ಬರುತ್ತಿದೆ ಎಂದು ಮೂಲಗಳು ತಿಳಿಸಿವೆ.

ಎಂಎಸ್‌ಪಿಟಿಸಿ ಕೇಂದ್ರದಲ್ಲಿ ಗೋಧಿಯನ್ನು ಬಳಕೆ ಮಾಡದೆ ನಿರ್ಲಕ್ಷ್ಯದಿಂದ ಹಾಳು ಮಾಡಿ ನಂತರ ಚೀಲಗಳನ್ನು ಹಳ್ಳದಲ್ಲಿ ಎಸೆದಿದ್ದಾರೆ. ಸಂಬಂಧಿಸಿದ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಹನುಮೇಶ ಕುರ್ನಾಳ, ಹನುಮಗೌಡ ಇತರರು ಆಗ್ರಹಿಸಿದ್ದಾರೆ.

# ಯಲ್ಲಾಲಿಂಗ ಸಾವಿನ ಪ್ರಕರಣ: 9 ಜನ ಖುಲಾಸೆ




**ಕೊಪ್ಪಳ :** ದಶಕದ ಹಿಂದೆ ಸಚಿವ ಶಿವರಾಜ ತಂಗಡಗಿ ರಾಜೀನಾಮೆಗೆ ಕಾರಣವಾಗಿದ್ದ ವಿದ್ಯಾರ್ಥಿ ಯಲ್ಲಾಲಿಂಗನ ಸಾವಿನ ಪ್ರಕರಣದ ಅಂತಿಮ ಆದೇಶ ಇಲ್ಲಿನ ಜಿಲ್ಲಾ ಕೋರ್ಟ್ ಶುಕ್ರವಾರ ಪ್ರಕಟಿಸಿದ್ದು, ಎಲ್ಲ ಒಂಬತ್ತು ಆರೋಪಿಗಳನ್ನು ಖುಲಾಸೆ ಮಾಡಲಾಗಿದೆ.

ಕನಕಗಿರಿ ತಾಲ್ಲೂಕಿನ ಕನಕಾಪುರ ಗ್ರಾಮದ ಯಲ್ಲಾಲಿಂಗ ಗ್ರಾಮದಲ್ಲಿ ನಡೆದಿದ್ದ ಭ್ರಷ್ಟಾಚಾರದ ಬಗ್ಗೆ ಮಾತನಾಡಿದ್ದರು. ಇದಾದ ಬಳಿಕ 2015ರ ಜನವರಿ 11ರಂದು ಆತನ ಮೃತದೇಹ ಕೊಪ್ಪಳ ರೈಲ್ವೆ ಹಳಿಯ ಬಳಿ ಪತ್ತೆಯಾಗಿತ್ತು. ಕೆಲವೇ ದಿನಗಳಲ್ಲಿ ಇದು ಕೊಲೆ ಎಂದು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣವೂ ದಾಖಲಾಗಿತ್ತು.

ಪ್ರಕರಣದಲ್ಲಿ ಸಚಿವ ತಂಗಡಗಿ ಆಪ್ತ ಹನುಮೇಶ ನಾಯಕ ಸೇರಿ ಒಂಬತ್ತು ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದರಿಂದ ದಶಕದ ಹಿಂದೆ ಇದು ರಾಜ್ಯದ ರಾಜಕಾರಣದಲ್ಲಿದೊಡ್ಡಸುದ್ದಿಯಾಗಿತ್ತು.ರಾಜಕೀಯ ಒತ್ತಡದ ಬಳಿಕ ಸರ್ಕಾರ ಸಿಐಡಿ ತನಿಖೆಗೆ ವಹಿಸಿತ್ತು. ರಾಜಕೀಯ ಷಡ್ಯಂತ್ರದ ಕಾರಣಕ್ಕೆ ಒಂಬತ್ತು ಜನರ ಮೇಲೆ ಕೊಲೆ ಆರೋಪ ಹೊರಿಸಲಾಗಿತ್ತು. ಇದು ನಿರಾಧಾರ ಎಂದು ನ್ಯಾಯಾಲಯ ಹೇಳಿದೆ' ಎಂದು ವಕೀಲ ಗಂಗಾಧರ ಈ ಕುರಿತು ಮಾಧ್ಯಮಗಳಿಗೆ ಮಾಹಿತಿ ನೀಡಿದರು.

# ದಿ. 13 ರಿಂದ ಕಾಮಗಾರಿ ಸ್ಥಗಿತದ ಎಚ್ಚರಿಕೆ



**ಕೊಪ್ಪಳ :** 'ಸಂಸದ ರಾಜಶೇಖರ ಹಿಟ್ನಾಳ ಪ್ರೇರಣಾ ಎನ್ನುವ ಏಜೆನ್ಸಿ ಆರಂಭಿಸಿದ್ದು, ಜಿಲ್ಲೆಯಎಲ್ಲಕ್ರಷರ್‌ಗಳಮಾಲೀಕರನ್ನುತಮ್ಮ ಏಜೆನ್ಸಿಯ ಅಧೀನಕ್ಕೆ ಪಡೆದುಕೊಂಡಿದ್ದಾರೆ. ಇನ್ನು ಮುಂದೆ ಯಾರೇ ಕ್ರಷರ್ ಸಂಬಂಧಿತ ಸಾಮಗ್ರಿ ಪಡೆಯಲು ಅದು ಅವರ ಏಜೆನ್ಸಿ ಮೂಲಕವೇ ಖರೀದಿ ಮಾಡಬೇಕು ಎನ್ನುವ ಸ್ಥಿತಿ ಸೃಷ್ಟಿಮಾಡಿದ್ದು ಸರಿಯಲ್ಲ' ಎಂದು ಜಿಲ್ಲಾ ಗುತ್ತಿಗೆದಾರರ ಸಂಘ ಅಸಮಾಧಾನ ವ್ಯಕ್ತಪಡಿಸಿದೆ.

ಸಂಘದ ಜಿಲ್ಲಾಧ್ಯಕ್ಷ ಸುರೇಶ ಭೂಮರೆಡ್ಡಿ, ಜಿಲ್ಲಾ ಕಾರ್ಯದರ್ಶಿ ದೇವಪ್ಪ ಅರಕೇರಿ, ಯಲಬುರ್ಗಾ ತಾಲ್ಲೂಕು ಅಧ್ಯಕ್ಷ ಯಮನೂರಪ್ಪ ನಡವಲಮನಿ, ಕುಕನೂರು ತಾಲ್ಲೂಕು ಅಧ್ಯಕ್ಷ ಟಿ. ರತ್ನಾಕರ ಹಾಗೂ ಎಸ್‌ಸಿ, ಎಸ್‌ಟಿ ಗುತ್ತಿಗೆದಾರರ ಸಂಘದ ಜಿಲ್ಲಾಧ್ಯಕ್ಷ ಹನುಮೇಶ ಕಡೇಮನಿ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿ ನಡೆಸಿ 'ನಮ್ಮ ಅಸಮಾಧಾನವನ್ನು ಸಂಸದರ ಮುಂದೆಯೂ ಹೇಳಿದರೂ ಪ್ರಯೋಜನವಾಗಿಲ್ಲ. ಇದು ಇದೇ ರೀತಿ ಮುಂದುವರಿದರೆ ಅ. 13ರಿಂದ ಜಿಲ್ಲೆಯಲ್ಲಿನ ಎಲ್ಲ ಸರ್ಕಾರಿ ಕಾಮಗಾರಿಗಳನ್ನು ಸ್ಥಗಿತ ಮಾಡಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಇದುವರಗೆ ಎಲ್ಲಾ ಕ್ರಷರ್‌ಗಳ ಮಾಲೀಕರು ಹಾಗೂ ಗುತ್ತಿಗೆದಾರರ ಸಮನ್ವಯತೆಯಿಂದ ಕೆಲಸ ಮಾಡಿಕೊಂಡು ಬಂದಿದ್ದೇವೆ. ಸಂಸದರ ನಡೆಯಿಂದಕ್ರಷರ್‌ಗೆಸಂಬಂಧಿಸಿದ ಸಾಮಗ್ರಿಗಳನ್ನು ನೇರವಾಗಿ ಮಾಲೀಕರಿಂದ ಪಡೆದುಕೊಳ್ಳಲು ಅವಕಾಶವಿಲ್ಲ. ಸಾರ್ವಜನಿಕರ ಮೇಲೂ ಇದರ ಪರಿಣಾಮ ಬೀರಲಿದೆ. ಈ ವ್ಯವಸ್ಥೆಯನ್ನು ರಾಜಶೇಖರ ಹಿಟ್ನಾಳ ಏಕಗವಾಕ್ಷಿ ಪದ್ಧತಿ ಎಂದು ಸಮರ್ಥಿಸಿಕೊಳ್ಳುತ್ತಿದ್ದಾರೆ. ನಗದು ನೀಡಿಯೇ ಸಾಮಗ್ರಿ ಖರೀದಿ ಮಾಡುವುದರಿಂದ ಯಾವುದೇ ಬಾಕಿ ಉಳಿಯುವುದಿಲ್ಲ ಎಂದು ಆಮಿಷವೊಡ್ಡಿ ಕ್ರಷರ್‌ಗಳ ಮಾಲೀಕರನ್ನು ಏಜೆನ್ಸಿಯೊಳಗೆ ಸೇರಿಸಿಕೊಳ್ಳಲಾಗಿದೆ' ಎಂದು ಆರೋಪಿಸಿದರು.

ಕ್ರಷರ್ ಉದ್ಯಮವನ್ನು ಏಕಸ್ವಾಮ್ಯ ಮಾಡಿಕೊಂಡು ತಾವು ವಿಧಿಸುವ ದರದಲ್ಲಿಯೇ ಖರೀದಿಸುವುದನ್ನು ಕಡ್ಡಾಯವಾಗಿಸುವ ಹುನ್ನಾರ ನಡೆಯುತ್ತಿದೆ. ಇಂಥ ಏಜೆನ್ಸಿ ಪದ್ಧತಿ ಗುತ್ತಿಗೆದಾರರಿಗೆ ಮರಣಶಾಸನವಾಗಲಿದೆ. ಈಗಾಗಲೇ ಪ್ಯಾಕೇಜ್ ಟೆಂಡರ್ ಪದ್ಧತಿ ಜಾರಿ ಮಾಡಿ ಸಣ್ಣ ಗುತ್ತಿಗೆದಾರರನ್ನು ಸರ್ಕಾರ ನಿರ್ಮೂಲನೆ ಮಾಡಿದ್ದು, ಈಗ ಸಂಸದರ ನಡೆಯಿಂದ ಗಾಯದ ಮೇಲೆ ಬರೆ ಎಳೆದಂತೆ ಆಗಿದೆ' ಎಂದು ಬೇಸರ ವ್ಯಕ್ತಪಡಿಸಿದರು. ಇದನ್ನು ಆದಷ್ಟು ಬೇಗನೆ ಸರಿಪಡಿಸಬೇಕು, ಇಲ್ಲವಾದರೆ ಮುಂಬರುವ ದಿನಗಳಲ್ಲಿ ವಿವಿಧ ಹಂತಗಳಲ್ಲಿ ಹೋರಾಟ ನಡೆಸಲಾಗುವುದು ಎಂದು ತಿಳಿಸಿದರು.

# ನಾರಿಯರೆಳೆದರು ಶ್ರೀದೇವಿ ರಥ



**ಕಾರಟಗಿ :** ಪಟ್ಟಣದ ಜೆಪಿ ನಗರದ ಶ್ರೀದೇವಿ ದೇವಾಲಯದಲ್ಲಿ ಶರನ್ನವರಾತ್ರಿ ನಿಮಿತ್ತ ನಿರಂತರವಾಗಿ ನಡೆದಿದ್ದ ವಿವಿಧ ಧಾರ್ಮಿಕ ಕಾರ್ಯಕ್ರಮಗಳಿಗೆ ಶ್ರೀದೇವಿ ರಥೋತ್ಸವದೊಂದಿಗೆ ಶುಕ್ರವಾರ ತೆರೆ ಬಿದ್ದಿದೆ. ಮಹಿಳೆಯರೇ ರಥ ಎಳೆದು, ಪಲ್ಲಕ್ಕಿ ಹೊತ್ತು ಗಮನ ಸೆಳೆದರು. ದೇವಾಲಯದ ಮುಂಭಾಗದಲ್ಲಿ ಬೆಳಿಗ್ಗೆ ಮಡಿತೇರು ಎಳೆದು ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದಿದ್ದವು. ಸಂಜೆ ಧಾರ್ಮಿಕ ವಿಧಿ, ವಿಧಾನಗಳ ಬಳಿಕ ರಥೋತ್ಸವ ಆರಂಭಗೊಂಡಿತು.

ದೇವಾಲಯದಿಂದ ಆರಂಭಗೊಂಡ ರಥೋತ್ಸವ ನವಲಿ ರಸ್ತೆ, ಕನಕದಾಸ ವೃತ್ತದ ಎದುರು ಬಸವಣ್ಣ ಪಾದಗಟ್ಟೆಯವರೆಗೆ ಸಾಗಿ ವಾಪಸ್ ದೇವಾಲಯಕ್ಕೆ ಆಗಮಿಸಿ ಮುಕ್ತಾಯಗೊಂಡಿತು. ಮಹಿಳೆಯರು ನೂರಾರು ಸಂಖ್ಯೆಯಲ್ಲಿ ರಥ ಎಳೆಯಲು ಬರುತ್ತಿರುವುದು ಕಂಡುಬಂತು. ನೆರೆದ ಭಕ್ತರು ಬಾಳೆಹಣ್ಣು, ಉತ್ತತ್ತಿಗಳನ್ನು ರಥಕ್ಕೆ ಎಸೆದು ಜಯಘೋಷ ಹಾಕಿ ಸಂಭ್ರಮಿಸಿದರು.

ಬೆಳಿಗ್ಗಿನಿಂದ ದೇವಾಲಯದಲ್ಲಿ ವಿಶೇಷ ಪೂಜೆ, ಅರ್ಚನೆ, ಅಲಂಕಾರ ಸಹಿತ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಅರ್ಚಕ ಕೆ.ಎಂ.ಚನ್ನಬಸಯ್ಯಶಾಸ್ತ್ರಿ ನೇತೃತ್ವದಲ್ಲಿ ನಡೆದವು. ಪಟ್ಟಣ ಸಹಿತ ವಿವಿಧೆಡೆಯ ಭಕ್ತರು ಕುಟುಂಬ ಪರಿವಾರ ಸಮೇತ ಆಗಮಿಸಿ ಪೂಜೆ ಸಲ್ಲಿಸಿ, ಭಕ್ತಿ ಸಮರ್ಪಿಸಿದರು. ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಸದಸ್ಯರು, ಅಪಾರ ಸಂಖ್ಯೆಯ ಭಕ್ತರು ಕಾರ್ಯಕ್ರಮಗಳಿಗೆ ಸಾಕ್ಷಿಯಾದರು.

# ಶಾರದಾ ಶಾಲೆಯಲ್ಲಿ ದಾಂಡಿಯಾ ಸಂಭ್ರಮ



**ಕೊಪ್ಪಳ :** ಇಲ್ಲಿನ ಶಾರದಾ ಇಂಟರ್ ನ್ಯಾಷನಲ್ ಶಾಲೆಯಲ್ಲಿ ಸಾಂಸ್ಕೃತಿಕ ಪರಂಪರೆಯ ಬೆಳವಣಿಗೆಗಾಗಿ ದಾಂಡಿಯಾ ಉತ್ಸವ ಹಮ್ಮಿಕೊಳ್ಳಲಾಗಿತ್ತು. ನೂರಾರು ಜನ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸ್ಕೂಲ್ ಮೈದಾನದಲ್ಲಿ ವಿಶೇಷ ವೇದಿಕೆಯನ್ನು ಸಜ್ಜುಗೊಳಿಸಿ ದಾಂಡಿಯಾ ಪ್ರದರ್ಶಿಸಲಾಯಿತು.ಮಕ್ಕಳು ಮತ್ತು ಮಹಿಳೆಯರು ಸಾಂಪ್ರದಾಯಿಕ ಉಡುಪಿನಲ್ಲಿ ಗಾರ್ಬಾ-ಡಾಂಡಿಯಾ ನೃತ್ಯದಲ್ಲಿ ತೊಡಗಿದ್ದರು.

ಜಿಲ್ಲಾಧಿಕಾರಿ ಪತ್ನಿ ಮಹಾಲಕ್ಷ್ಮಿ, ಇನ್ನರ್‌ವೀಲ್ ಕ್ಲಬ್ ಹಾಗೂ ಕೊಪ್ಪಳದ ವಿವಿಧ ಮಹಿಳಾ ಗುಂಪುಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ಶಾಲೆಯ ಆಡಳಿತ ಮಂಡಳಿ, ಟ್ರಸ್ಟಿಗಳು, ಶಿಕ್ಷಕರು ಹಾಗೂ ಮಕ್ಕಳು ಪಾಲ್ಗೊಂಡು ಸಂಭ್ರಮಿಸಿದರು.

# ಬಿಜೆಪಿ ಪ್ರವಾಹ ಪ್ರವಾಸ: ಎಂ.ಬಿ.ಪಾಟೀಲ ವ್ಯಂಗ್ಯ



**ವಿಜಯಪುರ :** ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿ ತಗ್ಗಿದ್ದು, ಬಿಜೆಪಿಯವರು ಈಗ ಪ್ರವಾಸ ಕೈಗೊಂಡು ಏನು ವೀಕ್ಷಣೆ ಮಾಡುತ್ತಾರೆ ಎಂದು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ್ ಪ್ರಶ್ನಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರ ಜತೆಗೆಮಾತನಾಡಿದಅವರು,ಪ್ರವಾಹ ಪರಿಸ್ಥಿತಿ ಬಗ್ಗೆ ಮುಖ್ಯಮಂತ್ರಿಗಳು ವೈಮಾನಿಕ ಸಮೀಕ್ಷೆ ನಡೆಸಿದ ದಿನವೇ ಪರಿಹಾರವನ್ನೂ ಘೋಷಿಸಲಾಗಿದೆ. ಎನ್ ಡಿಆರ್ ಎಫ್ ಮಾರ್ಗಸೂಚಿಗಿಂತ ಹೆಚ್ಚುವರಿ ಪರಿಹಾರ ಸೇರಿ ಒಂದು ಹೆಕ್ಟೇರ್‌ಗೆ ಸುಮಾರು 17 ಸಾವಿರ ಪರಿಹಾರವನ್ನು ಘೋಷಿಸಲಾಗಿದೆ ಎಂದರು.

ಆಯಾ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು ಸಹ ಪರಿಸ್ಥಿತಿ ಅವಲೋಕಿಸಿದ್ದಾರೆ. ಈಗ ಪ್ರವಾಹ ತಗ್ಗಿದ್ದು, ಬಿಜೆಪಿಯವರು ಏನು ವೀಕ್ಷಣೆ ಮಾಡುತ್ತಾರೆ? ಇದು ರೈಲು ಹೋದ ನಂತರ ಟಿಕೆಟ್ ತೆಗೆಯಲು ಬರುವಂತಿದೆ ಎಂದು ವ್ಯಂಗ್ಯವಾಡಿದರು.

ಬಿಜೆಪಿಯಲ್ಲಿ ಆರ್.ಅಶೋಕ, ಬಿ.ವೈ.ವಿಜಯೇಂದ್ರ, ಪ್ರಹ್ಲಾದ ಜೋಶಿ, ವಿ.ಸೋಮಣ್ಣ ಸೇರಿದಂತೆ 20 ಬಣಗಳು ಇವೆ. ಬಿಜೆಪಿಗೆ ಒಂದಲ್ಲ, ನೂರು ಬಾಗಿಲುಗಳು ಇವೆ. ನೆರೆ ಪ್ರದೇಶಗಳಿಗೆ ಯಾವ ಬಾಗಿಲಿನ ಬಿಜೆಪಿಯವರು ಬರುತ್ತಿದ್ದಾರೆ ಗೊತ್ತಿಲ್ಲ ಎಂದರು.

ಕೇಂದ್ರ ಸರ್ಕಾರದಿಂದ 14, 15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕೆ ಸುಮಾರು 60 ರಿಂದ 70 ಸಾವಿರ ಕೋಟಿ ಅನ್ಯಾಯವಾಗಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರ ಸರ್ಕಾರ 5,800 ಕೋಟಿ ಅನುದಾನ ಘೋಷಿಸಿದ್ದರೂ ಇನ್ನೂ ಒಂದು ರೂಪಾಯಿ ಸಹ ಬಿಡುಗಡೆ ಮಾಡಿಲ್ಲ. ಹೀಗಾಗಿ ಬಿಜೆಪಿಯವರು ಮೊದಲು ರಾಜ್ಯಕ್ಕೆ ಬರಬೇಕಾದ ಅನುದಾನ ಬಿಡುಗಡೆ ಮಾಡಿಸಲಿ ಎಂದರು.

ಎನ್ ಡಿಆರ್ ಎಫ್ ಮಾರ್ಗಸೂಚಿ ಪ್ರಕಾರ ಬೆಳೆ ಹಾನಿ ಪರಿಹಾರ ಬಹಳ ಕಡಿಮೆ ಇದೆ. ಒಣಬೇಸಾಯಕ್ಕೆ ಕೇವಲ 8,500 ನಿಗದಿಯಾಗಿದ್ದು, ಇದನ್ನು ?20 ಸಾವಿರಕ್ಕೆ ಪರಿಷ್ಕರಣೆ ಮಾಡಿಸಲಿ.

ಈ ನಿಟ್ಟಿನಲ್ಲಿ ಬಿಜೆಪಿಯವರು ದೆಹಲಿಗೆ ಹೋಗಲಿ. ಆದರೆ, ಅವರಿಗೆ ದೆಹಲಿಗೆ ಹೋಗುವ ತಾಕತ್ತು, ಧೈರ್ಯ ಇಲ್ಲ.

ದೆಹಲಿಗೆ ಹೋಗಲು ಹೆದರಿಕೊಳ್ಳುತ್ತಾರೆ ಎಂದು ಕುಟುಕಿದರು.

# ಹೊರ್ತಿ ಕೆರೆ ಏರಿ ಬಿರುಕು: ಕಡಿಮೆಯಾದ ನೀರು



**ಹೊರ್ತಿ :** ಇಲ್ಲಿನ ಹೊರ್ತಿ ಕೆರೆ ತುಂಬಿ ಬಿರುಕು –ಬಿಟ್ಟು ಕುಸಿಯುತ್ತಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳ ಆದೇಶ ಹಾಗೂ ಶಾಸಕರ ಸೂಚನೆ ಮೇರೆಗೆ ಗುರುವಾರ ವಿಜಯಪುರ ಕೆಬಿಜೆಎನ್‌ಎಲ್ ಸಣ್ಣ ನೀರಾವರಿ ಇಲಾಖೆಯ ಅಧಿಕಾರಿಗಳು 3 ಜೆಸಿಬಿ ಮೂಲಕ ಕೆರೆಯ ಸಾಂಡ ಪಕ್ಕದಿಂದ, 5 ಮೀಟರ್ ಬಲ ಅಂತರದಲ್ಲಿ ಹರಿ ಕಡಿದು, ಅದರ ಮೂಲಕ ಕೆರೆಯಲ್ಲಿನ 5 ಅಡಿ ನೀರು ಕಡಿಮೆ ಮಾಡಿದರು.

ಈ ಕೆರೆಯ ನೀರು ಹಳ್ಳಕ್ಕೆ ಹರಿ ಬಿಟ್ಟಿದ್ದರಿಂದ ಹಳ್ಳದ ಪಕ್ಕದ ಹೊಲಗಳಿಗೆ ನೀರು ನುಗ್ಗಿ, ಒಡ್ಡು ಒಡೆದು ತುಂಬಾ ಹಾನಿ ಉಂಟು ಮಾಡಿದೆ.

ಈ ಕೆರೆ ಬಿರುಕು ಬಿದ್ದು ಕುಸಿಯಲು ಸಣ್ಣ ನೀರಾವರಿ ಇಲಾಖೆ ನಿರ್ಲಕ್ಷ್ಯ ಕಾರಣ ಹೊರ್ತಿ ರೈತರು ಆರೋಪಿಸಿದ್ದಾರೆ.

ಈ ವೇಳೆ, ಕೆಬಿಜೆಎನ್ ಎಲ್ ನ ವಿಜಯಪೂರ ಸಣ್ಣ ನೀರಾವರಿ ಇಲಾಖೆಯ ಕಾರ್ಯನಿವಾಹಕ ಎಂಜಿನಿಯರ ಎಸ್ ಎಸ್.ಕೊಳ್ಳಿ , ಸಹಾಯಕ ಎಂಜಿನಿಯರ ಸಂದೀಪ ಕುಡ್ಲೂರ, ಬಳ್ಳೊಳ್ಳಿ ಉಪತಹಶೀಲ್ದಾರ ಎ ಎಸ್ ಗೋಟ್ಯಾಳ, ಕಂದಾಯ ನೀರಿಕ್ಷಕ ಪಿ ಜೆ.ಕೊಡಹೊನ್ನ, ಗ್ರಾಮ ಆಡಳಿತಾಧಿಕಾರಿ ವೈ ಎಲ್. ಪೂಜಾರಿ, ಹೊರ್ತಿಯ ಪ್ರಗತಿಪರ ರೈತ ಅಣ್ಣಪ್ಪ ಎಸ್.ಖೈನೂರ ಹಾಗೂ ಕೆರೆಯ ಹಿಂದಿನ ಜಮೀನುಗಳ ರೈತರು ಮತ್ತು ಗ್ರಾಮಸ್ಥರು ಇದ್ದರು.

# ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಸೊಡ್ಡು ಹೊಡೆದ ಸರ್ಕಾರಿ ಶಾಲೆ



**ಇಂಡಿ :** ಸರ್ಕಾರಿ ಶಾಲೆಗಳೆಂದರೆ ಮೂಗು ಮುರಿಯುವ ಪಾಲಕರೇ ಹೆಚ್ಚು. ಇಂದು ಹೆಚ್ಚು ಹೆಚ್ಚು ಶುಲ್ಕ ಇರುವ ಶಾಲೆಗಳಿಗೆ ಹೆಚ್ಚಿನ ಮಾನ್ಯತೆ ಉಂಟಾಗಿದೆ. ಹೆಚ್ಚು ಶುಲ್ಕ ಪಡೆದರೆ ಗುಣಮಟ್ಟದ ಶಿಕ್ಷಣವಿದೆ ಎಂದು ತಿಳಿಯುವ ಇಂದಿನ ಪಾಲಕರಿಗೆ ಇಂಡಿ ತಾಲ್ಲೂಕಿನ ನಾದ (ಕೆ.ಡಿ) ಗ್ರಾಮದಲ್ಲಿರುವ ಸರ್ಕಾರಿ ಪ್ರೌಢಶಾಲೆಗೆ ಒಮ್ಮೆ ಬಂದು ನೋಡಿ. ನಾದ ಗ್ರಾಮದ ಸರ್ಕಾರಿ ಪ್ರೌಢಶಾಲೆ ಗುಣಾತ್ಮಕ ಶಿಕ್ಷಣ ನೀಡುವ ಮೂಲಕ ಗ್ರಾಮದ ಸುತ್ತಮುತ್ತಲಿನ ಹತ್ತಾರು ಗ್ರಾಮಗಳ ವಿದ್ಯಾರ್ಥಿಗಳನ್ನು ಸೆಳೆಯುತ್ತಿದೆ. ಈ ಶಾಲೆಯಲ್ಲಿ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ. ಶಿಕ್ಷಕರ ಹೆಚ್ಚಿನ ಪರಿಶ್ರಮದ ಫಲವಾಗಿ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣ, ಆಟಪಾಠ, ಸಾಂಸ್ಕೃತಿಕ ಕಾರ್ಯಕ್ರಮಗಳು, ನೀತಿ ಪಾಠ ಬೋಧನೆ, ಪರಿಸರ ಜ್ಞಾನ, ವಿಜ್ಞಾನ ಪ್ರಯೋಗ, ಉತ್ತಮ ಗ್ರಂಥಾಲಯ ಇವಲ್ಲದೇ ಶಾಲೆಯ ಆವರಣ ತುಂಬಾ ನೆಟ್ಟಿರುವ ಗಿಡಗಳು ಹೆಮ್ಮರವಾಗಿ ಬೆಳೆದಿದ್ದು, 15 ವರ್ಷಗಳಿಂದ ಶಾಲೆಯ ಆವರಣ ಮಲೆನಾಡಿನಶಾಲೆಗಳಂತೆಕಂಗೊಳಿಸುತ್ತಿದೆ. ಮಕ್ಕಳ ಬಿಸಿಯೂಟಕ್ಕೆ ಅಗತ್ಯವಿರುವ ತರಕಾರಿ ಶಾಲಾ ಆವರಣದಲ್ಲಿಯೇ ಬೆಳೆಯತ್ತಾರೆ.

ಈ ಶಾಲಾ ವಿದ್ಯಾರ್ಥಿಗಳು ಕ್ರೀಡಾಕೂಟ, ವಿಜ್ಞಾನ ವಸ್ತು ಪ್ರದರ್ಶನದಲ್ಲಿ ರಾಜ್ಯ ಮತ್ತು ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆ.

ಪ್ರಸಕ್ತ ವರ್ಷ ಶಿಕ್ಷಣ ಇಲಾಖೆ ಅಂದಾಜು 2 ಲಕ್ಷಮೌಲ್ಯದಡಿಜಿಟಲ್‌ಬೋರ್ಡ್‌ಕೊಡುಗೆ ನೀಡಲಿದ್ದು, ಅದನ್ನು ಬಳಸಿಕೊಂಡು ತಂತ್ರಜ್ಞಾನ ಆಧಾರಿತ ಗುಣಾತ್ಮಕ ಶಿಕ್ಷಣ ನೀಡಲಾಗುವುದು ಎನ್ನುತ್ತಾರೆ ಅಲ್ಲಿಯ ಮುಖ್ಯ ಶಿಕ್ಷಕ ಸಿ.ಎಂ.ಬಂಡಗರ.

ಶಾಲಾ ಆವರಣದಲ್ಲಿ ನಾನಾಬಗೆಯ ಗಿಡಗಳು ಬೆಳೆದು ಉತ್ತಮ ಪರಿಸರ ರೂಪಗೊಳ್ಳಲು ಶಾಲೆಯ ಶಿಕ್ಷಕ ವೃಂದದ ಪರಿಶ್ರಮವೇ ಕಾರಣವಾಗಿದೆ.

ಮಕ್ಕಳು ಶಾಲೆಯ ಆವರಣದಲ್ಲಿ ಕಾಲಿಟ್ಟರೆ ಮಲೆನಾಡಿನ ಅನುಭವ ಅವರಿಗೆ ಆಗುತ್ತಿದೆ. ಪ್ರತಿಯೊಬ್ಬ ವಿದ್ಯಾರ್ಥಿಗಳ ಬಗ್ಗೆ ಕಾಳಜಿ ವಹಿಸಲಾಗುತ್ತಿದೆ.ಶೈಕ್ಷಣಿಕ ಪ್ರಗತಿ ಸಾಧಿಸಲು ಗ್ರಾಮಸ್ಥರು, ಗ್ರಾಮ ಪಂಚಾಯತಿ, ಶಿಕ್ಷಣ ಇಲಾಖೆ ಮತ್ತು ಶಾಸಕರ ಸಹಕಾರವೇ ಕಾರಣ' ಎನ್ನುತ್ತಾರೆ ಜನರು ಹಾಗೂ ವಿದ್ಯಾರ್ಥಿಗಳ ಪೋಷಕರು.

# ಸಚಿವರ ಮಾತಿನಲ್ಲಿ ಹಿಡಿತವಿರಲಿ: ಅರವಿಂದ ಕುಲಕರ್ಣಿ



**ವಿಜಯಪುರ :** ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯವನ್ನು ಯಾವುದೇ ಕಾರಣಕ್ಕೂ ಖಾಸಗಿ ಸಹಭಾಗಿತ್ವದಲ್ಲಿ ಸ್ಥಾಪಿಸಬಾರದು ಎಂದು ಆಗ್ರಹಿಸಿ ನಡೆಸುತ್ತಿರುವ ಧರಣಿಗೆ ಯಾರದೋ ಕುಮ್ಮಕ್ಕಿದೆ ಎಂದು ಹೇಳುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಅವರು ಹೋರಾಟಗಾರರಬಗ್ಗೆಹಗುರವಾಗಿ ಮಾತನಾಡಿದ್ದಾರೆ.

ಸಚಿವರು ತಮ್ಮ ಮಾತನ್ನು ಹಿಂಪಡೆದು, ಹೋರಾಟಗಾರರ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ಸಚಿವರ ವಿರುದ್ಧವೇ ಹೋರಾಟ ಮಾಡಬೇಕಾಗುತ್ತದೆ ಎಂದು ಅಖಂಡ ಕರ್ನಾಟಕ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ಎಚ್ಚರಿಕೆ ನೀಡಿದ್ದಾರೆ.

ಧರಣಿ ಕುಳಿತವರು ಯಾವ ಕಾರಣಕ್ಕಾಗಿ ಕುಳಿತಿದ್ದಾರೆ,ಅವರನಿಲುವೇನುಯಾರಿಗಾಗಿ ಧರಣಿ ಕುಳಿತಿದ್ದಾರೆ ಮತ್ತು ಏತಕ್ಕಾಗಿ ಧರಣಿ ನಡೆಸುತ್ತಿದ್ದಾರೆ ಎಂದು ತಿಳಿದುಕೊಳ್ಳದೇ ಅಧಿಕಾರದ ದರ್ಪದಿಂದ ತಮ್ಮ ಮನಸ್ಸಿಗೆ ತೋಚಿದಂತೆ ಮಾತನಾಡಿರುವುದು ತಮ್ಮ ಸಚಿವ ಸ್ಥಾನಕ್ಕೆ ಶೋಭೆ ತರುವಂತಹದ್ದಲ್ಲ ಎಂದಿದ್ದಾರೆ.

ಧರಣಿ ಕುಳಿತವರು ಯಾರು ಅಜ್ಞಾನಿಗಳಿಲ್ಲ, ಎಲ್ಲರೂ ಉನ್ನತ ಶಿಕ್ಷಣ ಅಧ್ಯಯನ ಮಾಡಿದಂತವರು,

ಇಲ್ಲಿ ಯಾರದೂ ಸ್ವಾರ್ಥವಿಲ್ಲ, ಮತ್ತೊಬ್ಬರಿಂದ ಪ್ರಚೋದನೆಗೆ ಒಳಗಾಗಿ ಅಥವಾ ಯಾರ ಕುಮ್ಮಕ್ಕಿನಿಂದ ಧರಣಿ ಕುಳಿತಿಲ್ಲ, ಹೋರಾಟಗಾರರಿಗೆ ಸಚಿವರು ಅಗೌರವವಾಗಿ ಮಾತನಾಡಿ ರೊಚ್ಚಿಗೆಬ್ಬಿಸುವ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ.

ಯಾರ ಕುಮ್ಮಕ್ಕಿನಿಂದ ಹೋರಾಟ ನಡೆಯುತ್ತಿದೆ ಎಂಬುವುದನ್ನು ಸಚಿವರು ಬಹಿರಂಗ ಪಡಿಸಲಿ.

ಇವರು ಆಯ್ಕೆಯಾಗಿರುವುದು ಜನರ ಮತ ಭಿಕ್ಷೆಯಿಂದ ಎನ್ನುವುದು ಮರೆತಿದ್ದಾರೆ, ಜನರಿಗೆ ಅನ್ಯಾಯವಾದರೆ ಅನ್ಯಾಯವನ್ನು ಪ್ರತಿಭಟಿಸುವುದು ಸಂಘಟನೆಗಳ ಕರ್ತವ್ಯ, ಇಲ್ಲಿ ಯಾರ ಮಾತು ಕೇಳಿ ಯಾರ ಮುಲಾಜಿಗೂ ಒಳಗಾಗುವ ಅಗತ್ಯವಿಲ್ಲ ಎಂದಿದ್ದಾರೆ.

ಸರ್ಕಾರ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ನಡೆಸಲು ಉದ್ದೇಶಿಸಿರುವುದು ಕೋಟಿಕೋಟಿಹಣವನ್ನುಲೂಟಿಮಾಡುವ ಹುನ್ನಾರದಿಂದಲೇ ಹೊರತು,ಜನ ಹಿತಕ್ಕಲ್ಲ.

ಧರಣಿ ಕುಳಿತವರು ಎಲ್ಲರೂ ಪ್ರಾಮಾಣಿಕತೆಯಿಂದ ಸ್ವಂತ ಸಾವಿರಾರು ರೂಪಾಯಿ ಖರ್ಚು ಮಾಡಿ ಸಮಾಜದ ಒಳಿತಿಗಾಗಿ ಹೋರಾಟ ನಡೆಸುತ್ತಿದ್ದಾರೆ. ಸಾರ್ವಜನಿಕ ಕಾಳಜಿಯನ್ನು ಹೊಂದಿದ್ದಾರೆ ಯಾರ ವೈಯಕ್ತಿಕ ಹಿತಾಸಕ್ತಿ ಹೋರಾಟದಲ್ಲಿ ಇಲ್ಲ

**ಅರವಿಂದ ಕುಲಕರ್ಣಿರಾಜ್ಯ ಪ್ರಧಾನ**
**ಕಾರ್ಯದರ್ಶಿಅಖಂಡ ಕರ್ನಾಟಕ ರೈತ ಸಂಘ**

ಇದರಲ್ಲಿ ಪಿಪಿಪಿ ಮಾದರಿ ಬೇಕಾಗಿರುವುದು ಜನಪ್ರತಿನಿಧಿಗಳಿಗೆ ಹೊರತು ಜನಸಾಮಾನ್ಯರಿಗಲ್ಲ.

ಪಿಪಿಪಿ ಮಾಡುವುದರಿಂದ ಜನಪ್ರತಿನಿಧಿಗಳಿಗೇ ಲಾಭವಿದೆ ಹೊರತಾಗಿ ಜನಸಾಮಾನ್ಯರಿಗೆ ನಯಾಪೈಸೆ ಲಾಭವಿಲ್ಲ ಎಂದು ಆರೋಪಿಸಿದರು.

ಒಂದು ವೇಳೆ ಸಚಿವರು ಹೇಳಿದಂತೆ ಪಿಪಿಪಿ ಮಾದರಿಯಿಂದ ಖಾಸಗಿಯವರಿಗೆ ಅನುಕೂಲವಿಲ್ಲ ಎಂದಾದರೆ 500 ಕೋಟಿ ಬಂಡವಾಳ ಹೂಡಲಾಗುವುದು ಎಂದು ಶಾಸಕ ಯತ್ನಾಳ ಅವರು ಹೇಳಿರುವುದು ಏತಕ್ಕೆ. ಇದು ತಮ್ಮ ಲಾಭಕ್ಕಾಗಿಯೇ ಹೊರತಾಗಿ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸುವುದಕ್ಕಲ್ಲ.

ಇದನ್ನು ಖಂಡಿಸಿ ನಾವು ಹೋರಾಟ ನಡೆಸುತ್ತಿದ್ದರೆ ಹೋರಾಟಗಾರರಿಗೆ ಹಗುರವಾಗಿ ಮಾತನಾಡುವುದು ಸರಿಯಲ್ಲ ಎಂದು ಪ್ರಕಟಣೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

## ಧರಣಿ 16 ದಿನ ಪೂರೈಕೆ

**ವಿಜಯಪುರ :** ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ಅನಿರ್ದಿಷ್ಟಾವಧಿ ಧರಣಿ ಶುಕ್ರವಾರ 16ನೇ ದಿನ ಪೂರೈಸಿತು. ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ರಾಜ್ಯ ಉಪಾಧ್ಯಕ್ಷ ಸೋಮಶೇಖರಗೌಡ ಮಾತನಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶಿಕ್ಷಣಕ್ಕೆ ಕಡಿಮೆ ಬಜೆಟ್ ಒದಗಿಸುತ್ತಿವೆ. ಶಿಕ್ಷಣ ಉಚಿತ ಕೊಟ್ಟರೆ ಮುಂದೆ ಸರ್ಕಾರವನ್ನೇ ಪ್ರಶ್ನೆ ಮಾಡುತ್ತಾರೆ ಅದಕ್ಕಾಗಿ ಎಲ್ಲರನ್ನೂ ಶಿಕ್ಷಣದಿಂದ ಆದಷ್ಟು ದೂರ ಇಡುವ ಕೆಲಸ ನಡೆದಿದೆ ಎಂದು ಆರೋಪಿಸಿದರು. ಅರವಿಂದ ಕುಲಕರ್ಣಿ ಭಗವಾನ್ ರೆಡ್ಡಿ ಅಕ್ರಂ ಮಾಶಾಳಕರ ಲಲಿತಾ ಬಿಜ್ಜರಗಿವಿದ್ಯಾವತಿಅಂಕಲಗಿಮಲ್ಲಿಕಾರ್ಜುನ ಬಟಗಿ ಬಾಬುರಾವ್ ಬೀರಕಬ್ಬಿ ಸುರೇಶ ಬಿಜಾಪುರಅನಿಲಹೊಸಮನಿಭರತಕುಮಾರ ಎಚ್ ಟಿ ಸಿದ್ದಲಿಂಗ ಬಾಗೇವಾಡಿ ಗೀತಾ. ಎಚ್. ಸಿದ್ರಾಮ ಹಿರೇಮಠ ಜಯದೇವ ಸೂರ್ಯವಂಶಿ ಶಿವಬಾಳಮ್ಮ ಕೊಂಡಗೂಳಿ ಶ್ರೀಕಾಂತ್ ಕೊಂಡಗೂಳಿ ಕಾವೇರಿ ರಜಪೂತ ಮಹದೇವಿ ಧರ್ಮಶೆಟ್ಟಿ ಶಿವರಂಜನಿ ಎಸ್ ಬಿ ನೀಲಾಂಬಿಕಾ ಬಿರಾದರ ಮೀನಾಕ್ಷಿ ಮಿಣಜಗಿ ಸುಶೀಲಾ ಮಿಣಜಗಿ ಬೋಗೇಶ್ ಸೋಲಾಪುರ ಮಲ್ಲಿಕಾರ್ಜುನ ಎಚ್.ಟಿ ಬಸವರಾಜ ಸುತ್ತಗುಂಡಿ ಪ್ರಕಾಶ ಬಿರಾದರ ಸಂಗಪ್ಪ ಹಂಗರಗಿ ಸಂಗಮೇಶ ಕುಂಬಾರ ಮಳೆಪ್ಪ ಸುರೇಶ ಕಿರಸಾರ ಹನಮಪ್ಪ ಹೂಗಾರ ಭಾಗವಹಿಸಿದ್ದರು.

# ಜಯನಗರ ಕರ್ನಾಟಕ ನ್ಯಾಷನಲ್ ಎಜುಕೇಷನ್ ಸೊಸೈಟಿಯಿಂದ ಗಾಂಧಿ ಜಯಂತಿ ಆಚರಣೆ

## ಮಹಾತ್ಮಾಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಜೀವನ ಪ್ರತಿಯೊಬ್ಬರಿಗೂ ಪ್ರೇರಣೆ: ಡಾ. ಎಚ್. ಎಸ್. ಎಂ. ಪ್ರಕಾಶ್



**ಬೆಂಗಳೂರು :** ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜೀವನ ಮೌಲ್ಯಗಳು ಸದಾ ಕಾಲಕ್ಕೂ ಪ್ರೇರಣಾದಾಕವಾಗಿದ್ದು, ರಾಷ್ಟ್ರಪಿತ ಮಹಾತ್ಮಾಗಾಂಧೀಜಿ ಅವರ ಬದುಕು ಪ್ರತಿಯೊಬ್ಬರಿಗೂ ಮಾದರಿ ಎಂದು ಭಾರತೀಯ ಸರ್ವೇಕ್ಷಣಾ ಇಲಾಖೆಯ ಉಪ ಮಹಾ ನಿರ್ದೇಶಕ ಡಾ. ಎಚ್. ಎಸ್. ಎಂ. ಪ್ರಕಾಶ್ ಹೇಳಿದ್ದಾರೆ.

ಜಯನಗರಕರ್ನಾಟಕನ್ಯಾಷನಲ್ ಎಜುಕೇಷನ್ ಸೊಸೈಟಿಯಿಂದ ಆಯೋಜಿಸಲಾದ ಗಾಂಧಿ ಜಯಂತಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು,

ಶಾಸ್ತ್ರಿ ಮತ್ತು ಗಾಂಧೀಜಿ ಅವರ ಮೌಲ್ಯಗಳು, ಕೊಡುಗೆಗಳು ಎಲ್ಲಾ ಕಾಲಕ್ಕೂ ಪ್ರಸ್ತುತ. ಇಂದಿನ ಸಮಾಜದಲ್ಲಿ ಗಾಂಧೀಜಿ ಸಿದ್ಧಾಂತಗಳನ್ನು ಅನುಸರಿಸುವುದು ತ್ರಾಸದಾಯಕ. ಇವರ ಬದುಕು, ಬರಹ ಕುರಿತು ಪುಸ್ತಕಗಳನ್ನು ಓದಿ ತಿಳಿದುಕೊಳ್ಳಬೇಕು. ದೇಶ ನಿರ್ಮಾಣದಲ್ಲಿ ಭೂವಿಜ್ಞಾನ ಮತ್ತು ಗಣಿಗಾರಿಕಾ ಕ್ಷೇತ್ರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ ಎಂದರು.

ವಿದ್ಯಾರ್ಥಿಗಳಾದ ಸಿಂಚನಾ ಮತ್ತು ನಿಶಾಂತ್ ಸರ್ವಧರ್ಮ ಪ್ರಾರ್ಥನೆಗಳನ್ನು ಹಾಡಿದರು. ಎನ್ಸಿಸಿ ಮತ್ತು ಎನ್‌ಎಸ್‌ಎಸ್ ಘಟಕಗಳ ವಿದ್ಯಾರ್ಥಿಗಳು ಉತ್ಸಾಹದಿಂದ ಪಾಲ್ಗೊಂಡರು.

ಕರ್ನಾಟಕ ನ್ಯಾಷನಲ್ ಎಜುಕೇಷನ್ ಸೊಸೈಟಿ ಗೌರವ ಕಾರ್ಯದರ್ಶಿವಿ.ವೆಂಕಟಶಿವರೆಡ್ಡಿ ಅಧ್ಯಕ್ಷತೆ ವಹಿಸಿದ್ದರು.

ಜಂಟಿ ಕಾರ್ಯದರ್ಶಿ ಸುಧಾಕರ ಎಸ್ತೂರಿ, ಎನ್ಸಿಜೆ ಪ್ರಾಂಶುಪಾಲರಾದ ಡಾ. ಸಿ. ವಿಜಯಲಕ್ಷ್ಮಿ, ಎನ್ಸಿಜೆಪಿಯು ಪ್ರಾಂಶುಪಾಲರಾದ ಪ್ರೊ. ಮಮತಾ ಎಸ್, ಡೀನ್ ಡಾ. ಉಮಾ ಎಸ್. ಕೆ,ಡಾ. ಎಚ್.ಎನ್. ಎನ್.ಸಿ.ಇ ಪ್ರಾಂಶುಪಾಲರಾದ ಡಾ.ಡಿ.ಜಯದೇವಪ್ಪಮತ್ತಿತರರು ಪಾಲ್ಗೊಂಡರು.

# ಧಾರ್ಮಿಕ ಭಾವನೆಗೆ ಧಕ್ಕೆ ತರುವ ಪೋಸ್ಟ್: ಬಂಧನ




**ಜೇವರ್ಗಿ:** ಪವಿತ್ರ ಧಾರ್ಮಿಕ ಸ್ಥಳ ಮೆಕ್ಕಾ, ಮಸೀದಿ ಹಾಗೂ ಕಾಬಾ ಕುರಿತು ಮುಸ್ಲಿಂ ಸಮುದಾಯದ ಭಾವನೆಗಳಿಗೆ ಧಕ್ಕೆ ಆಗುವಂತೆ ಜಾಲತಾಣದಲ್ಲಿ ಪೊ?ಸ್ಟ್ ಹಾಕಿದ್ದ ಯುವಕ, ಯಡ್ರಾಮಿ ತಾಲ್ಲೂಕಿನ ಇಜೇರಿಯ ಆನಂದ ಗುತ್ತೇದಾರ (22) ನನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಯು ಆಕ್ಷೇಪಾರ್ಹ ಪೋಸ್ಟ್ ಜೊತೆಗೆ ಹಿಂದಿಯಲ್ಲಿ ಭಾಷೆಯಲ್ಲಿ 'ಸನಾತನಿ ಹೋತೋ ಕಮೆಂಟ್‌ಮೆ ಲಿಕೋ ಜೈ ಶ್ರೀರಾಮ' ಅಂತ ಬರೆದಿದ್ದರು' ಎಂದು ಆರೋಪಿಸಿ ಸೈಯದ್ ಪಟೇಲ್ ಕಾಲೇಗೌಡಾ ಅವರು ಪೊಲೀಸರಿಗೆ ದೂರು ನೀಡಿದ್ದರು. ಜೇವರ್ಗಿ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

# ಸಂಗಮನಾಥ ಶ್ರೀಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ



**ಕಲಬುರಗಿ:** ಚಿತ್ತಾಪುರ ತಾಲೂಕಿನ ಅಳ್ಳೊಳ್ಳಿ ಸಾವಿರ ದೇವರ ಮಠದ ಸಂಗಮನಾಥ ಮಹಾಸ್ವಾಮಿಗಳಿಗೆ ಅಂತರಾಷ್ಟ್ರೀಯಸಂಸ್ಕೃತಿಅಕಾಡೆಮಿಅಂತರಾಷ್ಟ್ರೀಯ ಸಂಸ್ಕೃತಿ ಸಂಶೋಧನಾ ವಿಶ್ವವಿದ್ಯಾಲಯದ ವತಿಯಿಂದ ಗೌರವ ಡಾಕ್ಟರೇಟ್ ಪದವಿ ನೀಡಲಾಗಿದೆ. ತಮಿಳುನಾಡಿನ ಹೊಸೂರನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಸಂಗಮನಾಥ ಮಹಾಸ್ವಾಮಿಗಳಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು. ಕಾರ್ಯಕ್ರಮದಲ್ಲಿ ದಂಡಗುಂಡದ ಸಂಗನಬಸವ ಶಿವಾಚಾರ್ಯಮಹಾಸ್ವಾಮಿಗಳು,ವಿಶ್ವವಿದ್ಯಾಲಯದ ಅನೇಕ ಗಣ್ಯ ಮಾನ್ಯ ವ್ಯಕ್ತಿಗಳು ಹಾಗೂ ಅಪಾರ ಭಕ್ತಾದಿಗಳು ಉಪಸ್ಥಿತರಿದ್ದರು.

# ಝೆಡ್‌ಇಡಿ ಮತ್ತು ಲೀನ್ ಯೋಜನೆ ಕುರಿತು ಕಾರ್ಯಾಗಾರ



**ಜಮಖಂಡಿ :** ಇತ್ತೀಚೆಗೆ ಜಮಖಂಡಿಯ ಶ್ರೇಯಸ್ ಹೊಟೆಲ್ ನಲ್ಲಿ ಝೆಡ್ ಇ ಡಿ ಮತ್ತು ಲೀನ್ ಯೋಜನೆ ಕುರಿತು ಜಿಲ್ಲೆಯ ಸೂಕ್ಷ್ಮ, ಸಣ್ಣ ಮತ್ತು ಮದ್ಯಮ ಕೈಗಾರಿಕೆಗಳಿಗೆ ಏರ್ಪಡಿಸಿದ ಒಂದು ದಿನದ ಕಾರ್ಯಾಗಾರವನ್ನು ಪ್ರಕಾಶ ಮುತ್ತೂರು, ಗೋಲ್ಡನ್ ಆಗ್ರೋ ಇಂಡಸ್ಟ್ರಿಸ್ ರಾಂಬಾಗ್ ಕೈಗಾರಿಕಾ ವಸಾಹತು, ಜಮಖಂಡಿ ರವರು ಉದ್ಘಾಟಿಸಿ ಮಾತನಾಡುತ್ತ ರಾಷ್ಟ್ರೀಯ/ಅಂತರಾಷ್ಟ್ರೀಯ ಮಟ್ಟದಲ್ಲಿ ಸಣ್ಣ ಕೈಗಾರಿಕೆಗಳು ಪೈಪೋಟಿ ಮಾಡಲು ಗುಣಮಟ್ಟ ಬಹಳ ಮುಖ್ಯ. ಈ ನಿಟ್ಟಿನಲ್ಲಿ ಈ ಭಾಗದ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೆ ಕಾರ್ಯಾಗಾರ ಏರ್ಪಡಿಸಿದ್ದು ಸಮಯೋಚಿತವಾಗಿದೆ. ಯೋಜನೆಯ ಲಾಭ ಪಡೆದು ಹೆಚ್ಚಿನ ಘಟಕಗಳು ಝೆಡ್ ಇ ಡಿ ಮತ್ತು ಲೀನ್ ಯೋಜನೆಯಲ್ಲಿ ನೊಂದಾಯಿಸಲು ಕರೆನೀಡಿದರು.

ಶ್ರೀ ಪಶಾಂತ ಬಾರಿಗಿಡದ , ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಬಾಗಲಕೋಟೆ ಮಾತನಾಡುತ್ತ ಜಿಲ್ಲೆಯಲ್ಲಿ ಸುಮಾರು 20 ಸಕ್ಕರೆ ಮತ್ತು ಸಿಮೆಂಟಿ ನ ಬೃಹತ್ ಕೈಗಾರಿಕೆಗಳು ಇದ್ದು ಅವುಗಳಿಗೆ ಪೂರಕ ಘಟಕಗಳು ಹೆಚ್ಚಿನ ಪ್ರಮಾಣದಲ್ಲಿ ಸ್ಥಾಪನೆ ಆಗಬೇಕಿದ್ದು, ಜಿಲ್ಲೆಯ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಯುವಜನತೆ ಮುಂದೆ ಬರಬೇಕಿದೆ ಎಂದು ಹೇಳಿದರು. ಕೈಗಾರಿಕೆಗಳನ್ನು ಸ್ಥಾಪಿಸಲು ಸರಕಾರವು ನೂತನ ಕೈಗಾರಿಕಾ ನೀತಿ 2025–30 ಘೋಷಿಸಿದ್ದು ಇದರ ಸದುಪಯೋಗ ಮಾಡಿಕೊಳ್ಳಲು ಸೂಚಿಸಿದರು.

ಶ್ರೀಮತಿ ಸುಪ್ರಿತಾ ಬಳ್ಳಾರಿ ಜಂಟಿ ನಿರ್ದೇಶಕರು ಸಿಡಾಕ್ ರವರು ಮಾತನಾಡುತ್ತ ಸಿಡಾಕ್ ಸಂಸ್ಥೆಯಲ್ಲಿ ಉದ್ದಿಮೆ ಸ್ಥಾಪಿಸಲು ಇರುವ ಯೋಜನೆಗಳ ಕುರಿತು ವಿವರಿಸಿದರು ಹಾಗೂ ಶ್ರವಣ–ಕುಮಾರ,ಶಾಖಾ ವ್ಯವಸ್ಥಾಪಕರು, ಕೆನರಾ ಬ್ಯಾಂಕ್ ಜಮಖಂಡಿ ಇವರು ಉಪಸ್ಥಿತರಿದ್ದರು.

ಶ್ರೀ ಮಂಜುನಾಥ ಹೊಸಮನಿ ಉಪನಿರ್ದೇಶಕರುಸ್ವಾಗತಿಸಿದರು, ಶ್ರೀಮತಿ ರತ್ನಾ ಅಂಗಡಿ ಸಹಾಯಕ ನಿರ್ದೇಶಕರು ಅಥಿತಿಗಳಿಗೆ ನೆನಪಿನ ಕಾಣಿಕೆ ವಿತರಿಸಿದರು ಮತ್ತು ಶ್ರೀ ಅತಿಬ್ ಜಮಾದಾರ ಸಹಾಯಕ ನಿರ್ದೇಶಕರು ಇವರು ವಂದನಾರ್ಪಣೆ ಸಲ್ಲಿಸಿದರು. ತಾಂತ್ರಿಕ ಅಧಿವೇಶನವನ್ನು ಶ್ರೀ ಮೂರ್ತಿ, ವಿಕೇರ್ ಸಂಸ್ಥೆ, ಬೆಂಗಳೂರು ರವರು ನಡೆಸಿಕೊಟ್ಟರು ಹಾಗೂ ಝೆಡ್ ಇ ಡಿ ಮತ್ತು ಲೀನ್ ಅಡಿಯಲ್ಲಿ ಘಟಕಗಳ ನೊಂದಣಿಗೆ ಮಾರ್ಗದರ್ಶನ ಮಾಡಿದರು ಮತ್ತು ಉದ್ಯಮಿಗಳ ಪ್ರಶ್ನೆಗಳಿಗೆ ಉತ್ತರಿಸಿದರು.

# ಮನೆ ಬೀಗ ಮುರಿದು 9.57 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು




**ಕಲಬುರಗಿ:** ಮನೆ ಬೀಗ ಮುರಿದು 9.57 ಲಕ್ಷ ರೂ.ಮೌಲ್ಯದ ನಗನಾಣ್ಯ ಕಳವು ಮಾಡಿರುವ ಘಟನೆ ಮಾಲಗತ್ತಿ ಕ್ರಾಸ್‌ನ ಅಮನ್ ನಗರದಲ್ಲಿ ನಡೆದಿದೆ.

ಸೈಯದ್ ಗೌಸ್ ಪಾಶಾ ಎಂಬುವವರ ಮನೆ ಬೀಗ ಮುರಿದು ಕಳ್ಳರು 9 ಲಕ್ಷ ರೂ.ಮೌಲ್ಯದ 99 ಗ್ರಾಂ.ಬಂಗಾರದ ಆಭರಣ, 30 ಸಾವಿರ ರೂ.ಮೌಲ್ಯದ 30 ತೊಲೆ ಬೆಳ್ಳಿ ಮತ್ತು 27 ಸಾವಿರ ರೂ.ನಗದು ದೋಚಿಕೊಂಡು ಹೋಗಿದ್ದಾರೆ. ಈ ಸಂಬಂಧ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State